ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/-
ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ-06 • ಸಂಚಿಕೆ-09 • ಫೆಬ್ರವರಿ 2025

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

KARNTAKA GANDHI SMARAKA NIDHI



ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ
ಬೆಂಗಳೂರು - 560001

https://gandhibhavan.in

ಗಾಂಧಿ ಭವನ ಡಿಜಿಟಲ್ ಆರ್ಕೈವ್

#SERVANTSOFKNOWLEDGE
Scanning Is The New Spinning

https://archive.org/details/GandhiBhavan

ಗಾಂಧೀಜಿಯವರ ವಿಚಾರಗಳನ್ನು ಪ್ರಸಾರಗೊಳಿಸಲು ಕೈಗೊಂಡಿರುವ ಡಿಜಿಟಲ್ ಮಾಧ್ಯಮ ಚಟುವಟಿಕೆ



ಗಾಂಧಿ ಸಂಚಯ

https://gandhi.sanchaya.net

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಎಲ್ಲ ಪ್ರಕಟಣೆಗಳು ಈ ಜಾಲತಾಣದಲ್ಲಿ ಉಚಿತವಾಗಿ ಲಭ್ಯ

ಬಾಪೂ ಪ್ರಪಂಚ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಮಾಸಿಕ
'ಬಾಪೂ ಪ್ರಪಂಚ' ಇ - ಪುಸ್ತಕ ಇಲ್ಲಿ ದೊರೆಯುತ್ತದೆ.

Google Play Books

iBooks

ರೂ. 28/- BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-06 • ಸಂಚಿಕೆ-09 • ಫೆಬ್ರವರಿ 2025

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations,** Bangalore

ಪತ್ರಗಳು

ಮಾನ್ಯರೆ,

"ಬಾಪು ಪ್ರಪಂಚ," ಜನವರಿ –25ರ ಸಂಚಿಕೆಯಲ್ಲಿ ನಿಮ್ಮ ಸುದೀರ್ಘ ಲೇಖನ ಗಾಂಧಿ ವಿಚಾರಧಾರೆಯ ಒಂದು ಸಮಗ್ರ ಪರಿಚಯ. 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಂಪೂರ್ಣ ಮಾಹಿತಿ ಜೊತೆಯಲ್ಲಿ ಗಾಂಧಿ ತತ್ವಗಳನ್ನು ಸಮರ್ಥವಾಗಿ ನಿರೂಪಿಸಿದ್ದೀರಿ. ಆ ಕಾರಣ ನಿಮ್ಮನ್ನು ಅಭಿನಂದಿಸುತ್ತೇನೆ. ಆ ಅಧಿವೇಶನದ ಚಿತ್ರ ಸಂಗ್ರಹವೂ ಐತಿಹಾಸಿಕ ಹಿನ್ನೋಟದ ಒಂದು ದಾಖಲೆಯಾಗಿದೆ. ಈ ಸಂಚಿಕೆ ಗಾಂಧಿ ಕುರಿತ ನನ್ನ ಅರಿವನ್ನು ಹೆಚ್ಚಿಸಿದೆ. ಧನ್ಯವಾದಗಳು.

– ಹೆಚ್ ಎಸ್ ಈಶ್ವರ, ಬೆಂಗಳೂರು

* * *

ಮಾನ್ಯರೆ,

ಡಿಸೆಂಬರ್ ಸಂಚಿಕೆಯಲ್ಲಿ ' ಬೆಳಗಾಂ ಕಾಂಗ್ರೆಸ್ ಅಧಿವೇಶನ – ಒಂದು ನೋಟ ' ಲೇಖನ ಕಣ್ಣಿಗೆ ಕಟ್ಟುವಂತೆ , ಮನಕ್ಕೆ ಮುಟ್ಟುವಂತೆ ಸುಂದರವಾಗಿ ಚಿತ್ರಿಸಿದೆ. ಅಧಿವೇಶನದ ಚಿತ್ರಾವಳಿಯಲ್ಲಿ ಮೂಡಿ ಬಂದ ಕಪ್ಪು ಬಿಳುಪು ಫೋಟೋಗಳು ನಮ್ಮ ನೆನಪನ್ನು 100 ವರ್ಷಗಳ ಹಿಂದಕ್ಕೆ ಕೊಂಡೊಯ್ಯುತ್ತವೆ . ಒಟ್ಟಾರೆ ಇದೊಂದು ಸಂಗ್ರಹ ಯೋಗ್ಯವಾದ ದಾಖಲೀಕರಣವಾಗಿದೆ . ಲೇಖಕರಾದ ಎನ್ ಆರ್ ವಿಶುಕುಮಾರ ಅವರಿಗೆ ಧನ್ಯವಾದ ಹಾಗೂ ಅಭಿನಂದನೆಗಳು . ಬೆಳಗಾಂ ಜಿಲ್ಲೆಯ ಹುದಲಿ ಗ್ರಾಮದಲ್ಲಿ ಗಾಂಧೀಜಿಯವರ ನಾಲ್ಕೈದು ದಿನಗಳ ವಾಸ್ತವ್ಯದ ಬಗ್ಗೆ ಇಂತಹದೊಂದು ಲೇಖನ ಮೂಡಿ ಬರಲಿ .

– ಸಿ ಯು ಬೆಳ್ಳಕ್ಕಿ, ಧಾರವಾಡ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.

ಪತ್ರಿಕೆಯ ಬಗ್ಗೆ
ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com





ಕರ್ನಾಟಕ ಗಾಂಧಿ ಸ್ಮಾರಕ ನಿಧಿ - 75

ಸಾಧನೆಯ ಸಂಭ್ರಮ...

– ಎನ್. ಆರ್. ವಿಶುಕುಮಾರ್

ಜನವರಿ 30, 1948. ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹತ್ಯೆಯಾದ ಕರಾಳ ದಿನ . ಇವರ ಹತ್ಯೆಯ ನಂತರ ಗಾಂಧೀಜಿಯವರ ವಿಚಾರಗಳನ್ನು ಮುಂದಿನ ಪೀಳಿಗೆಗೆ ತಲುಪಿಸಲು ಅಖಿಲ ಭಾರತ ಮಟ್ಟದಲ್ಲಿ ಅಂದಿನ ರಾಷ್ಟ್ರಪತಿಗಳಾದ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರ ನೇತೃತ್ವದಲ್ಲಿ ಪ್ರಧಾನಿ ಪಂಡಿತ್ ಜವಾಹರಲಾಲ್ ಆದಿಯಾಗಿ ದೇಶದ ಇಪ್ಪತ್ತೊಂದು ಗಣ್ಯಾತಿ ಗಣ್ಯರ ನೇತೃತ್ವದಲ್ಲಿ ಗಾಂಧಿ ಸ್ಮಾರಕ ನಿಧಿಯನ್ನು ಸ್ಥಾಪಿಸಲಾಯಿತು. ಈ ನಿಧಿಗೆ ದೇಶಾದ್ಯಂತ ಜನಸಾಮಾನ್ಯರು 10,95,29,106 ರೂಗಳ ಕೊಡುಗೆಯನ್ನು ನೀಡಿದರು . ಈ ನಿಧಿಗೆ ಕರ್ನಾಟಕದಿಂದ 36,42,430 ರೂಗಳನ್ನು ಸಂಗ್ರಹಿಸಿ ನೀಡಲಾಯಿತು.

ಹೀಗೆ ವಿವಿಧ ಪ್ರಾಂತ್ಯಗಳಿಂದ ಸಂಗ್ರಹವಾದ ಹಣವನ್ನು ಒಗ್ಗೂಡಿಸಿ ರಾಷ್ಟ್ರ ಮಟ್ಟದಲ್ಲಿ ಗಾಂಧಿ ಸ್ಮಾರಕ ನಿಧಿಯನ್ನು ಸ್ಥಾಪಿಸಲಾಯಿತು . ಈ ನಿಧಿಯ ಸಹಾಯದಿಂದ ಭಾರತದಾದ್ಯಂತ ಆಯಾ ರಾಜ್ಯ , ಪ್ರಾಂತ್ಯಗಳ ಹೆಸರಿನಲ್ಲಿ ಗಾಂಧಿ ಸ್ಮಾರಕ ನಿಧಿಗಳನ್ನು ಸ್ಥಾಪಿಸಲಾಗಿದೆ . ಹೀಗೆ 1948 ರ ಆಸುಪಾಸಿನಲ್ಲಿ ಅಂದಿನ ಮೈಸೂರು ಪ್ರಾಂತ್ಯದಲ್ಲಿ ಗಾಂಧಿ ಸ್ಮಾರಕ ನಿಧಿ ಆರಂಭವಾಯಿತು .1948 ರಿಂದ 1956 ರವರೆಗೆ ಅಂದಿನ ಮೈಸೂರು ಪ್ರಾಂತ್ಯದಲ್ಲಿ ಎರಡು ಗಾಂಧಿ ಸ್ಮಾರಕ ನಿಧಿ ಘಟಕಗಳು ಕಾರ್ಯನಿರ್ವಹಿಸುತ್ತಿದ್ದವು . ಬೆಂಗಳೂರು ನಗರ ಕೇಂದ್ರಿತವಾಗಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಮತ್ತು ಹುಬ್ಬಳ್ಳಿ ನಗರ ಕೇಂದ್ರಿತವಾಗಿ ಉತ್ತರ ಕರ್ನಾಟಕ ಪ್ರಾಂತ್ಯದಲ್ಲಿ ಹೀಗೆ ಎರಡು ಗಾಂಧಿ ಸ್ಮಾರಕ ನಿಧಿ ಘಟಕಗಳು ಇದ್ದವು.

ಸಮಸ್ತ ಕನ್ನಡಿಗರ ಆಶಯದಂತೆ ಕನ್ನಡ ಭಾಷೆ ಮಾತನಾಡುವ ಎಲ್ಲ ಪ್ರಾಂತ್ಯಗಳು ಒಂದಾಗಿ 1957 ರಲ್ಲಿ ವಿಶಾಲ ಮೈಸೂರು ರಾಜ್ಯ ರಚನೆಯಾದಾಗ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿದ್ದ ಎರಡೂ ಗಾಂಧಿ ಸ್ಮಾರಕ ನಿಧಿಗಳು ಒಗ್ಗೂಡಿ ಮೈಸೂರು ರಾಜ್ಯ ಮಂಡಳಿ ರಚನೆಯಾಯಿತು. ಅಂದಿನ ಬಾಂಬೆ ವಿಧಾನಸಭೆಯ ಮಾಜಿ ಸ್ಪೀಕರ್ ಆಗಿದ್ದ ಧಾರವಾಡ ಭಾಗದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಆರ್ ಎಸ್ ಹುಕ್ಕೇರಿಕರ್ ಅವರನ್ನು ಮೈಸೂರು ರಾಜ್ಯ ಮಂಡಳಿಯ ಅಧ್ಯಕ್ಷರನ್ನಾಗಿ ಕೇಂದ್ರ ಗಾಂಧಿ ಸ್ಮಾರಕ ನಿಧಿಯು ನೇಮಕ ಮಾಡಿತು . 1963 ರಲ್ಲಿ ಟೇಕೂರು ಸುಬ್ರಮಣ್ಯ ಅವರು 1975 ರಲ್ಲಿ ಕಡಿದಾಳ್ ಮಂಜಪ್ಪನವರು, 1985 ರಲ್ಲಿ ಹೋ . ಶ್ರೀನಿವಾಸಯ್ಯ ಅವರು ಮತ್ತು ಪ್ರಸ್ತುತ ಡಾ . ವೂಡೇ ಪಿ ಕೃಷ್ಣ ಅವರು 2017 ರಿಂದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದಾರೆ .

ಮಹಾತ್ಮ ಗಾಂಧೀಜಿಯವರ ಆಶಯಗಳು ಮತ್ತು ವಿಚಾರಗಳನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಹಿಂದಿನ ಎಲ್ಲ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಪರಿಶ್ರಮ ಹಾಗೂ ವಿಶಿಷ್ಟ ಕಾರ್ಯ ವೈಖರಿಯಿಂದಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಈಗ ದೇಶದಲ್ಲೇ ಮಾದರಿಯಾಗಿದೆ . ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ರಾಷ್ಟ್ರೀಯ ಸೇವಾ ಯೋಜನೆಯ ಜೊತೆಗೂಡಿ ಗಾಂಧೀಜಿಯವರ ವಿಚಾರ ಧಾರೆಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ತಲುಪಿಸುವ



ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರುಗಳು

ಮಹತ್ವದ ಹೆಜ್ಜೆಯನ್ನು ಇಟ್ಟಿದೆ . ಪ್ರತೀ ವರ್ಷ ರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಏಳು ದಿನಗಳ ಎಂಟು ಎನ್ ಎಸ್ ಎಸ್ ಶಿಬಿರಗಳನ್ನು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ಒಂದು ದಿನದ 30 ಶಿಬಿರಗಳನ್ನು ಗಾಂಧಿ ಸ್ಮಾರಕ ನಿಧಿ ಸಂಘಟಿಸುತ್ತಿದೆ.ಇದರ ಜೊತೆಗೆ ಎನ್ ಎಸ್ ಎಸ್ ಅಧಿಕಾರಿಗಳಿಗಾಗಿ ಹಲವಾರು ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸುತ್ತಿದೆ. ಈ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಗಾಂಧಿ ವಿಚಾರಗಳ ಬಗ್ಗೆ ಆಸಕ್ತಿ ತಳೆದು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುತ್ತಿದ್ದಾರೆ. ಇದು ಗಾಂಧಿ ಭವನದ ಯಶಸ್ಸಿನ ಹಾದಿಯ ಪಯಣ.

ಇಂದಿನ ಡಿಜಿಟಲ್ ಯುಗದಲ್ಲಿ ಗಾಂಧಿ ವಿಚಾರ ಸಾಹಿತ್ಯವನ್ನು ಡಿಜಿಟಲ್ ವೇದಿಕೆಗಳ ಮೂಲಕ ಜನಸಮುದಾಯಕ್ಕೆ ತಲುಪಿಸಲು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕಾರ್ಯನಿರತವಾಗಿದ್ದು ಮಹತ್ತರ ಸಾಧನೆ ಮಾಡಿದೆ. ಗಾಂಧೀಜಿಯವರಿಗೆ ಸಂಬಂದಿಸಿದಂತೆ ಮುಕ್ತ ಸಾರ್ವಜನಿಕ ವೇದಿಕೆಯಲ್ಲಿ ಲಭ್ಯವಿರುವ ಗಾಂಧಿ ವಿಚಾರ ಸಾಹಿತ್ಯದ ಸುಮಾರು 1500ಕ್ಕೂ ಹೆಚ್ಚು ಪ್ರಮುಖ ಕೃತಿಗಳನ್ನು ಹಾಗೂ ಧ್ವನಿ ಮತ್ತು ದೃಶ್ಯ ಸಂಗ್ರಹಗಳನ್ನು **'ಗಾಂಧಿ ಭವನ ಡಿಜಿಟಲ್ ಆರ್ಕೈವ್'** ಹೆಸರಿನಲ್ಲಿ ಸಂಗ್ರಹಿಸಿ ಸರ್ವೆಂಟ್ಸ್ ಆಫ್ ನಾಲೆಡ್ಜ್ ಸಹಯೋಗದೊಡನೆ ಇಂಟರ್ ನೆಟ್ ಆರ್ಕೈವ್ ಜಾಲತಾಣದಲ್ಲಿ ಇಡಲಾಗಿದೆ. ಈ ಡಿಜಿಟಲ್ ಸಂಗ್ರಹದ ಡ್ರೈವ್ ನ್ನು ದೇಶಾದ್ಯಂತ ಇರುವ ಗಾಂಧಿ ಸ್ಮಾರಕ ನಿಧಿಗಳಿಗೆ ಮತ್ತು ಪ್ರತಿಷ್ಠಿತ ಸಬರಮತಿ ಗಾಂಧಿ ಆಶ್ರಮಕ್ಕೆ ಉಚಿತ ಕೊಡುಗೆಯಾಗಿ ನೀಡಿದ್ದು ಅವರೆಲ್ಲರಿಂದ ಪ್ರಶಂಸೆ ವ್ಯಕ್ತವಾಗಿದೆ. ಈ ಡ್ರೈವ್ ನ ಮೂಲಕ ಇಂಟರ್ ನೆಟ್ ಸೌಲಭ್ಯವಿಲ್ಲದೆ ಕೂಡಾ ಆ ಸಂಸ್ಥೆಗಳು ಗಾಂಧಿ ವಿಚಾರ ಸಾಹಿತ್ಯವನ್ನು ಸುಲಭವಾಗಿ ಓದಿಕೊಳ್ಳಬಹುದಾಗಿದೆ ಮತ್ತು ಆಡಿಯೋ ವಿಡಿಯೋಗಳನ್ನು ಕೂಡಾ ನೋಡಿಕೊಳ್ಳಬಹುದಾಗಿದೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ನವ ದೆಹಲಿಯಲ್ಲಿರುವ ತನ್ನ ಮಾತೃ ಸಂಸ್ಥೆ ಗಾಂಧಿ ಸ್ಮಾರಕ ನಿಧಿಗೆ 75 ವರ್ಷಗಳು ತುಂಬಿದ ಸಂದರ್ಭದಲ್ಲಿ ಎರಡು ದಿನಗಳ ಅಂತರ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕಳೆದ ವರ್ಷ ಬೆಂಗಳೂರಿನಲ್ಲಿ ಸಂಘಟಿಸಿ ಮಾತೃ ಸಂಸ್ಥೆ ಹಾಗೂ ಇತರೆ ಗಾಂಧಿ ಸ್ಮಾರಕ ನಿಧಿಗಳ ಮೆಚ್ಚುಗೆ ಗಳಿಸಿದೆ.


ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಇಷ್ಟೆಲ್ಲ ಸಾಧನೆಗಳಿಗೆ ಕರ್ನಾಟಕ ಸರ್ಕಾರ ಸದಾ ಒತ್ತಾಸೆಯಾಗಿ ನಿಂತಿರುವುದನ್ನು ಇಲ್ಲಿ ಪ್ರಮುಖವಾಗಿ ನೆನೆದುಕೊಳ್ಳಲೇ ಬೇಕು . ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಟ್ಟಡ ನಿರ್ಮಾಣಕ್ಕಾಗಿ ಬೆಂಗಳೂರಿನ ಕೇಂದ್ರ ಸ್ಥಳವಾದ ಕುಮಾರ ಪಾರ್ಕ್ ನಲ್ಲಿ ವಿಶಾಲವಾದ ನಿವೇಶನವನ್ನು ಕರ್ನಾಟಕ ಸರ್ಕಾರವು 1960 ರ ದಶಕದಲ್ಲಿಯೇ ಕೊಡುಗೆಯಾಗಿ ನೀಡಿದೆ . ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಚ್ ಡಿ ಕುಮಾರಸ್ವಾಮಿಯವರು ಬೆಂಗಳೂರಿನಲ್ಲಿರುವ ಗಾಂಧಿ ಭವನಕ್ಕೆ 2006 ರಲ್ಲಿ ಪ್ರಥಮವಾಗಿ ಭೇಟಿ ನೀಡಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಗೆ ವಿಶೇಷ ಅನುದಾನ ನೀಡಿ ಇಲ್ಲಿನ ಚಟುವಟಿಕೆಗಳಿಗೆ ಉತ್ತೇಜನ ನೀಡಿದರು .ನಂತರದಲ್ಲಿ ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದ ಬಿ ಎಸ್ ಯಡಿಯೂರಪ್ಪನವರು , ಎಸ್ ಎಂ ಕೃಷ್ಣರವರು ಮತ್ತು ಸಿದ್ಧರಾಮಯ್ಯನವರು ಸಹ ಗಾಂಧಿ ಸ್ಮಾರಕ ನಿಧಿಗೆ ವಿಶೇಷ ಒಲವು ತೋರಿಸುತ್ತಾ ಆರ್ಥಿಕ ನೆರವು ನೀಡುತ್ತಿದ್ದಾರೆ .

ಸಿದ್ಧರಾಮಯ್ಯನವರು 2013 ರಲ್ಲಿ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡು ಐದು ವರ್ಷ ಆಡಳಿತ ನಡೆಸಿದ ಅವಧಿಯಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಗೆ ಮತ್ತು ಗಾಂಧಿ ಪ್ರಣೀತ ಸಂಘ ಸಂಸ್ಥೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆತಿದೆ . ಗಾಂಧಿ ಸ್ಮಾರಕ ನಿಧಿಯು ಸರ್ಕಾರಕ್ಕೆ ಸಲ್ಲಿಸಿದ ಹಲವಾರು ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ. ತಲಾ ಮೂರು ಕೋಟಿ ರೂಗಳ ವೆಚ್ಚದಲ್ಲಿ **'ಜಿಲ್ಲೆಗೊಂದು ಗಾಂಧಿ ಭವನ'** ನಿರ್ಮಿಸುವ ಯೋಜನೆಯಡಿಯಲ್ಲಿ ಹನ್ನೆರಡು ಜಿಲ್ಲೆಗಳಲ್ಲಿ ಗಾಂಧಿ ಭವನಗಳು ಪೂರ್ಣವಾಗಿ ನಿರ್ಮಾಣವಾಗಿರುವುದನ್ನು ಇಲ್ಲಿ ವಿಶೇಷವಾಗಿ ಸ್ಮರಿಸಿಕೊಳ್ಳಲೇಬೇಕು.

ಈಗ ಎರಡನೇ ಅವಧಿಗೆ ಮುಖ್ಯಮಂತ್ರಿಗಳಾಗಿರುವ ಸಿದ್ಧರಾಮಯ್ಯನವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ 75 ನೇ ವರ್ಷಾಚರಣೆಯ ಸಂದರ್ಭದಲ್ಲಿ ಮತ್ತು ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಅಂಗವಾಗಿ ಸರ್ಕಾರವೇ ಆಚರಿಸುತ್ತಿರುವ **'ಗಾಂಧಿ ಭಾರತ'** ಕಾರ್ಯಕ್ರಮದ ಅಡಿಯಲ್ಲಿ ತಮ್ಮದೇ ಕನಸಿನ **'ಜಿಲ್ಲೆಗೊಂದು ಗಾಂಧಿ ಭವನ'** ಯೋಜನೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳ ಬೇಕಾಗಿದೆ.

ಎನ್ ಆರ್ ವಿಶುಕುಮಾರ್

ಕಾರ್ಯಾಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ



ಅದೃಷ್ಟಹೀನ ಭಾರತ

– ಕುವೆಂಪು

ರಾಷ್ಟ್ರಪಿತ ದಿವಂಗತ
ಅದೃಷ್ಟಹೀನ ಭಾರತ
ರಾಷ್ಟ್ರಪಿತ ದಿವಂಗತ
ಉನ್ಮತ್ತ ಹಸ್ತ ಹತ!
ನರಹೃದಯದ ವಿಷವಾರ್ಧಿಗೆ
ಜೀವಾಮೃತ ಸಮರ್ಪಿತಃ
ಕ್ಷಮಿಸು ಓ ಜಗತ್ ಪಿತಃ
ಅದೃಷ್ಟಹೀನ ಭಾರತ!


ನಮ್ಮ ರಾಷ್ಟ್ರದ ಪಿತಾಮಹನು ರಣರಂಗದ ಮಧ್ಯೆ ಶರಶಯ್ಯೆಯಲ್ಲಿ ಅಸ್ತಂಗತನಾದನು. ನಮ್ಮ ಸಾಕ್ರೆಟೀಸನಿಗೆ ವಿಷಪಾನ ಮಾಡಿಸಿಯಾಯಿತು. ನಮ್ಮ ಯೇಸುಕ್ರಿಸ್ತನು ಶಿಲುಬೆಗೇರಿದನು. ಜಗದ್ವಂದ್ಯ ಲೋಕಗುರು ಪೂಜ್ಯ ಮಹಾತ್ಮಾಗಾಂಧಿ ತಲೆಕೆಟ್ಟ ಕೊಲೆಗಾರನೊಬ್ಬನ ಕ್ರೂರ ಹಸ್ತದಿಂದ ಪ್ರಾರ್ಥನಾ ಸಭೆಯ ವೇದಿಕೆಯ ಮೇಲೆ, ತಮ್ಮಿಬ್ಬರು ಮೊಮ್ಮಕ್ಕಳ ಪ್ರೇಮ ಬಾಹುಗಳ ನಡುವೆ ನಿಂತು, ತಮ್ಮನ್ನು ಸ್ವಾಗತಿಸುತ್ತಿದ್ದ ವಿಪುಲಜನವೃಂದಕ್ಕೆ ತಮ್ಮೆರಡು ಕೈಗಳನ್ನೂ ಹಣೆಗೆತ್ತಿ ನಮಸ್ಕರಿಸುತ್ತಿದ್ದಾಗಲೇ ಮೃತ್ಯುರಾಹುವಿಗೆ ತುತ್ತಾದರು. ವೇದಿಕೆಯ ಮೇಲೆ ಅತೀ ಸಮೀಪದಲ್ಲಿ ಕುಳಿತ ಹಿಂದೂ ಯುವಕನೊಬ್ಬನು ಚಿಮ್ಮಿ ನಿಂತು ಅವರ ತೆರೆದೆದೆಗೆ ಗುಂಡಿಟ್ಟು ಕೊಂದನಂತೆ. ಹಿಂದೆಂದೂ ಭರತಖಂಡದಲ್ಲಿ ನಡೆಯದಂತಹ ಇಂತಹ ಅಸಹ್ಯವಾದ ಘೋರ ಪಾತಕವನ್ನು ಇಂದು ನಡೆಸಿ ನಮ್ಮ ದೇಶಕ್ಕೆ ದೇಶವೇ ಜಗತ್ತಿನ ಮುಂದೆ ಮಹಾಪರಾಧಿಯಾಗಿದೆ; ಅವಮಾನಿತವಾಗಿದೆ. ನಾವು ತಲೆಯೆತ್ತಿ ನಡೆಯದಂತಾಗಿದೆ. ನಮ್ಮ ದೇಶ ತಿರಸ್ಕಾರಕ್ಕೂ ಶಾಪಕ್ಕೂ ಪಕ್ಕಾಗಿದೆ. ಈ ಪಾಪಕಾರ್ಯಕ್ಕೆ ತಕ್ಕ ತಪಸ್ಯೆಯಿಂದ ಪಶ್ಚಾತ್ತಾಪದಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ನಮಗೆ ಯೇಸುಕ್ರಿಸ್ತನನ್ನು ಮೊಳೆಹೊಡೆದು ಕೊಂದ ಜನಾಂಗಕ್ಕಾಗಿರುವ ದುರ್ಗತಿಯೇ ಒದಗುತ್ತದೆಯೇನೋ ಎಂದು ಹೆದರಿಕೆಯಾಗುತ್ತಿದೆ.

ಮತ್ತೇನಿದ್ದೀತು ನಾವು ಕೈಕೊಳ್ಳುವ ಆ ಪ್ರಾಯಶ್ಚಿತ್ತ? ಯಾವ ಮಹಾಪುರುಷನ ಪ್ರೇಮಮಯ ಹೃದಯವು ಗುಂಡು ತಗುಲಿ ಬಿರಿಯಿತೋ ಆ ಹೃದಯದ ಆಶೆ ಆಕಾಂಕ್ಷೆ ಆದರ್ಶಗಳನ್ನು ಅಚಂಚಲವಾದ ದೃಢತೆಯಿಂದ ಆಚರಿಸಿ ಸಾಧಿಸುವುದೊಂದೇ ನಮಗೆ ಮುಂದಿರುವ ಶ್ರೇಯೋಮಾರ್ಗ. ಶಿಲುಬೆಗೇರಿದ ಯೇಸು ಕ್ರಿಸ್ತನಿಗೆ, 'ಕ್ಷಮಿಸು ತಂದೆ!' ಎಂದು ಮಾನವರ ಪರವಾಗಿ ಭಗವಂತನನ್ನು ಬೇಡಲು ಸ್ವಲ್ಪ ಪ್ರಜ್ಞೆಯಾದರೂ ಇತ್ತಂತೆ. ನಿನ್ನೆ ಮಡಿದ ನಮ್ಮ ಕ್ರಿಸ್ತನಿಗೆ ಅಷ್ಟಕ್ಕೂ ಅವಕಾಶ ಕೊಡದಷ್ಟು ಬೇಗನೆ ಪ್ರಜ್ಞೆ ಹೋಯಿತಂತೆ. ಆದರೂ ಆತನ

ಮುಖಮುದ್ರೆ ಪ್ರಶಾಂತವಾಗಿ, ಕ್ಷಮಾಶೀಲವಾಗಿ, ಧ್ಯಾನಪೂರ್ಣ ಶಾಂತಿಯಿಂದ ತುಂಬಿ, 'ಕ್ಷಮಿಸು ತಂದೆ!' ಎನ್ನುವಂತಿತ್ತೆಂದು ಆ ವರ್ಣನೆಯನ್ನು ಕೇಳಿದವರೆಲ್ಲರಿಗೂ ವೇದ್ಯವಾಗಿರುಬೇಕು. ಮೃತಸ್ಥಿತಿಯಲ್ಲಿಯೂ ಅಮೃತವನ್ನೇ ಪ್ರೋಕ್ಷಿಸುತ್ತಿದ್ದ ಮುಖಮುದ್ರೆಯ ಸಂದೇಶ– ಕ್ಷಮೆ, ಪ್ರೇಮ, ಸತ್ಯ, ಅಹಿಂಸೆ ಇವು ನಮಗೆ ರಕ್ಷಾಮಂತ್ರಗಳಾಗಬೇಕು. ಹಾಗಾದರೆ ಮಾತ್ರವೇ ನಮ್ಮ ದೇಶದ ಸದ್ಯೋಜಾತ ಸ್ವಾತಂತ್ರ್ಯಕ್ಕೆ ರಕ್ಷಾಯಂತ್ರ ಸಿದ್ಧವಾಗುತ್ತದೆ.

ಎಷ್ಟು ಅನಿರೀಕ್ಷಿತ, ಎಷ್ಟು ಆಕಸ್ಮಿಕ, ಎಷ್ಟು ಭಯಂಕರವಾಗಿತ್ತು ನಿನ್ನೆ ಬಂದ ಆ ಘೋರವಾರ್ತೆ! ಮೊನ್ನೆತಾನೆ ಆಮರಣ ಪರ್ಯಂತ ಕೈಕೊಂಡ ಉಪವಾಸ ವ್ರತದಿಂದ ದೆಹಲಿಯ ವಿಷಸಮುದ್ರವನ್ನೂ ಕ್ಷೀರಸಾಗರವಾಗಿ ಪರಿವರ್ತಿಸಿ, ಲೋಕದ ಪ್ರಶಂಸೆಗೂ ಪೂಜೆಗೂ ಕೃತಜ್ಞತೆಗೂ ಪಾತ್ರರಾಗಿದ್ದರು. ಅಲ್ಲದೇ ನಮ್ಮೆಲ್ಲರಲ್ಲಿ ಮತ್ತೊಂದು ಹೊಸ ಆಶೆಯನ್ನೂ ಪ್ರಚೋದಿಸಿದ್ದರು. ನೂರಿಪ್ಪತ್ತೈದು ವರ್ಷದ ಹೊಂಗನಸು ಎಪ್ಪತೆಂಟಕ್ಕೇ ಬಿರಿಯುವಂತೆ ಮಾಡಿದ ಈಶ್ವರೇಚ್ಛೆಯ ಕಟುಲೀಲೆಗೆ ಏನು ಹೇಳುವುದು? ತಲೆಬಾಗಿ ಮೂಖರಾಗುವುದೊಂದೇ ದಾರಿ. ಆ ವಾರ್ತೆ ಕಿವಿಗೆ ಬಿದ್ದಾಗ ಜನ ನಕ್ಕುಬಿಟ್ಟರು. ಅದನ್ನು ತಿಳಿಸಿದವರಿಗೆ ಛೀ ಮಾಡಿದರು. ಸತ್ತರೆಂದು ನಂಬುವುದಾದರೂ ಎಂತು? ಗುಂಡು ಬಿದ್ದು ಸತ್ತರೆಂದಾಗಲೂ ಯಾರೂ ನಂಬದೆಹೋದರು. ಏನು? ಗಾಂಧೀಜಿಗೆ? ಗುಂಡಿನೇಟು? ಅಸಾಧ್ಯ! ಅಸಂಭವ! ಅವಿವೇಕ! ಸುಳ್ಳು! ಖಂಡಿತಾ ಸುಳ್ಳು! ಆಕಾಶವಾಣಿ ಲೋಕವಾರ್ತೆಯನ್ನು ಮತ್ತೆ ಮತ್ತೆ ಒತ್ತಿ ಒತ್ತಿ ಹೇಳಿದಾಗ ನಂಬಲೇಬೇಕಾಗಿ ಬಂತು.

ಆಗಂತೂ ಜನರಲ್ಲುಂಟಾದ ಕಳವಳ, ಭೀತಿ, ನಿರಾಶೆ, ಸಂಕಟ ಇವುಗಳನ್ನು ಹೇಳತೀರದು. ಬದುಕಿನ ಅರ್ಥವೇ ಇದ್ದಕ್ಕಿದ್ದಂತೆ ಶೂನ್ಯವಾದಂತಾಯಿತು. ಜೀವನದ ಪ್ರಯೋಜನವೇ ಕೊನೆಮುಟ್ಟಿದಂತೆ ತೋರಿತು. ಗಾಂಧಿ ಇಲ್ಲದ ಜಗತ್ತು! ತೆಗೆ ತೆಗೆ ಅದೆಲ್ಲಿಯ ಮಾತು! ಎರಡು ತಲೆಮಾರುಗಳಿಂದ ಪ್ರಪಂಚದ, ಅದರಲ್ಲಿಯೂ ಭರತಖಂಡದ ಬಾಳನ್ನೆಲ್ಲ ಆವರಿಸಿ, ಉಸಿರನ್ನೆಲ್ಲ ತುಂಬಿ ಚೇತನಕ್ಕೆ ಶಕ್ತಿಯಾಗಿ, ಕಣ್ಣಿಗೆ ಬೆಳಕಾಗಿ, ದಾರಿಗೆ ಸಂಗಾತಿಯಾಗಿ, ಗೆಳೆಯನಾಗಿ, ನಾಯಕನಾಗಿ, ಸುಧಾರಕನಾಗಿ,



ಮಾರ್ಗದರ್ಶಿಯೂ ಗುರುವೂ ಆಗಿದ್ದ ಗಾಂಧಿ ಇಲ್ಲದ ಜಗತ್ತು ಜಗತ್ತೆ? ಅದೊಂದು ಅಮಂಗಲ ವಿಪತ್ತು! ಉಳಿದವರ ಮಾತಿರಲಿ! ನೆಹರು, ಪಟೇಲ್, ಆಜಾದ್ ಅಂಥವರಿಗೂ ಏನಾಯಿತೆಂಬುದನ್ನು ರೇಡಿಯೋದಿಂದ ಕೇಳಿದ್ದೇವೆ. ಭಾರತದ ಪ್ರಧಾನಿ ಮತ್ತು ಉಪಪ್ರಧಾನಿ ಇಬ್ಬರೂ ದೆಹಲಿಯಿಂದ ಮಾಡಿದ ಪ್ರಸಾರ ಭಾಷಣಗಳಲ್ಲಿ ತಮ್ಮ ತಮ್ಮ ಸಹಜ ಧೈರ್ಯವನ್ನೂ ಒತ್ತಿ ಮೀರಿಬಂದ ದುಃಖಾತಿಶಯಕ್ಕೆ ಗದ್ಗದ ಧ್ವನಿ ನೀಡಿದುದನ್ನು ನಾವೆಲ್ಲರೂ ಆಲಿಸಿ ಮರುಗಿದ್ದೇವೆ.

ನಿಜ, ನಮ್ಮ ದುಃಖಕ್ಕೆ ತೀರವಿಲ್ಲ; ನಮ್ಮ ನಷ್ಟಕ್ಕೆ ಅಳತೆಯಿಲ್ಲ. ಎಂದೆಂದಿಗೂ ಪಡೆಯಲಾಗದ ಒಡವೆ ಚ್ಯುತವಾಗಿದೆ. ನಮ್ಮ ಆಧ್ಯಾತ್ಮಿಕ ರಿಕ್ತತೆಯೋ ಪಾತಾಳದಂತೆ ಗಂಭೀರವಾಗಿದೆ; ಆಕಾಶದಂತೆ ವಿಸ್ತಾರವಾಗಿದೆ. ನಿನ್ನೆ ಸರ್ವದೇಶಗಳನ್ನೂ ನಗುವಂತೆ ಶ್ರೀಮಂತರಾಗಿದ್ದವರು ಇಂದು ಎಲ್ಲ ನಾಡುಗಳೂ ನಗುವಂತೆ ದಟ್ಟದರಿದ್ರರಾಗಿದ್ದೇವೆ. ಆದರೂ, ಪಂಡಿತ ನೆಹರು ತಮ್ಮ ಭಾಷಣದಲ್ಲಿ ಹೇಳಿದಂತೆ, ಕ್ಲೈಬ್ಯಕ್ಕಿದು ಕಾಲವಲ್ಲ; ಅಧೈರ್ಯಕ್ಕಿದು ಅವಕಾಶವಲ್ಲ; ಅಸ್ಥಿರತೆಗೆ ಸಮಯವಲ್ಲ. ಗಾಂಧೀಜಿಗಾಗಿ ನಾವು ಅಳಬೇಕಾಗಿಲ್ಲ. ನಮ್ಮ ದುರದೃಷ್ಟಕ್ಕಾಗಿಯಾದರೂ ಅಳುತ್ತ ಕೂರುವುದು ಅವಿವೇಕವೇ.

ಈಶ್ವರನ ಲೀಲೆಯಲ್ಲಿ ಇಂತಹ ಘಟನೆ ಮೊಟ್ಟಮೊದಲನೆಯದಲ್ಲವೆಂದೂ ತೋರುತ್ತದೆ. ಶ್ರೀಕೃಷ್ಣನು ಎಂತಹ ದುರಂತ ಸನ್ನಿವೇಶದಲ್ಲಿ ಮೃತನಾದನೆಂಬುದನ್ನು ಊಹಿಸಿಕೊಳ್ಳಿ. ಶ್ರೀರಾಮಚಂದ್ರನಿಗೆ ಕೊನೆ ಬಂದ ಪರಿಯನ್ನೂ ನೆನೆಯಿರಿ. ಶ್ರೀ ಕ್ರಿಸ್ತನು ಎಂತಹ ದುರ್ಮರಣಕ್ಕೀಡಾದನು ಎಂಬುದನ್ನು ಪರ್ಯಾಲೋಚಿಸಿ. ನಮಗೆ ಅನರ್ಥವಾಗಿರುವುದು ಈಶ್ವರನ ಸಮದೃಷ್ಟಿಗೆ ಅರ್ಥಪೂರ್ಣವೂ ಸಾರ್ಥಕವೂ ಆಗಿರಬಾರದೇನು? ಮಹಾತ್ಮರೇ ಹೇಳುತ್ತಿದ್ದರು: 'ನನ್ನನ್ನು ಕೊಲ್ಲುವ ಸಾಮರ್ಥ್ಯ ಈಶ್ವರನಿಗೊಬ್ಬನಿಗೇ ಇದೆ' ಎಂದು. ಕೊಂದವನು ಯಃಕಶ್ಚಿತ್ ಮನುಷ್ಯನಾದರೂ ಅಲ್ಲಿಯೂ ರುದ್ರನ ಹಸ್ತವನ್ನು ಕಾಣಬಹುದು. ಸರ್ವಮಂಗಲ ನಿಧಿಯಾದ ಭಗವಂತನ ಇಚ್ಛೆಯಲ್ಲಿ ಶ್ರದ್ಧೆಯಿಟ್ಟು ಸಮಾಧಾನ ತಂದುಕೊಂಡು ಮುಂದಿನ ಕಾರ್ಯಕ್ಕೆ ಸೊಂಟಕಟ್ಟಿ ನಿಲ್ಲಬೇಕು.

ಆತ್ಮದ ಅಮೃತತ್ವದಲ್ಲಿಯೂ ಅವತಾರಗಳಲ್ಲಿಯೂ ಜನ್ಮಾಂತರ ಮತ್ತು ಪುನರ್ಜನ್ಮಗಳಲ್ಲಿಯೂ ಶ್ರದ್ಧಾಳುಗಳಾದ ನಮಗೆ ಪೂಜ್ಯ ಗಾಂಧೀಜಿಯ ದೇಹಾವಸಾನವು ಪುರರುತ್ಥಾನಕ್ಕೆ ಪ್ರಚೋದನವಾಗಬೇಕು. ಸ್ಥಿತಪ್ರಜ್ಞರಾದ ಗಾಂಧೀಜಿ ಮೃತರಾದರು ಎಂಬುದು ಲೋಕೋಪಚಾರದ ಮಾತು. ನಿಜವಾದ ನಿಜವಲ್ಲ. ಏಕ ದೇಹಸ್ಥವಾಗಿದ್ದ ಚೇತನ ಈಗ ಸರ್ವತ್ರವಾಗಿದೆ. ಆ ಶಕ್ತಿಗೆ ಅಂತ್ಯವಿಲ್ಲ. ಕಾಲ ಕಳೆದಂತೆಲ್ಲ ಅದು ಬಹುಗುಣಿತವಾಗುತ್ತಾ ಹೋಗುತ್ತದೆ. ಭಕ್ತಿಸೂತ್ರಗಳು ಹೇಳುವಂತೆ ಅಂತಹ ವಿಭೂತಿಗಳ ಅವಿರ್ಭಾವದಿಂದ, 'ಮೋದಂತೇ ಪಿತರೋ ನೃತ್ಯಂತಿ ದೇವತಾಃ ಸನಾಥಾಚೇಯಂ ಭೂರ್ಭವತಿ': 'ಪಿತೃಗಳು ನಲಿಯುತ್ತಾರೆ; ದೇವತೆಗಳು ಕುಣಿಯುತ್ತಾರೆ. ನಮ್ಮೀ ಪೃಥ್ವಿ ಸನಾಥಳಾಗುತ್ತಾಳೆ.' ಗಾಂಧೀಜಿಯನ್ನು ಹೆತ್ತ ನಮ್ಮೀ ಪೃಥ್ವಿ ಎಂದೆಂದಿಗೂ ಅನಾಥೆಯಲ್ಲ, ನಿತ್ಯ ಸನಾಥೆ! ಆ ಪೂಜ್ಯ ಮಹಾತ್ಮನು ನಮ್ಮನ್ನು ಕ್ಷಮಿಸಲಿ; ಆತನ ಕೃಪೆ ನಮ್ಮನ್ನು ಕೈಬಿಡದೆ ಕಾಯಲಿ; ಆ ದೇವಮಾನವನ ದಿವ್ಯಸ್ಮೃತಿ ಕಂಗೆಡುತ್ತಿರುವ ನಮ್ಮ ಜನತೆಯ ಮುನ್ನಡೆಗೆ ಗಗನೋನ್ನತ ದೀಪಸ್ತಂಭವಾಗಲಿ!

ಮಹಾತ್ಮಾ ಗಾಂಧೀಕಿ ಜೈ!

ಜೈ ಹಿಂದ್ !

ಮಹಾತ್ಮ ಗಾಂಧೀಜಿ ಹತ್ಯೆಯಾದ ಮರುದಿನ (31–01–1948) ರಾಷ್ಟ್ರಕವಿ ಕುವೆಂಪು ಅವರು ಮೈಸೂರು ಆಕಾಶವಾಣಿಯಿಂದ ಮಾಡಿದ ಪ್ರಸಾರ ಭಾಷಣ. (ಲಿಪ್ಯಾಂತರ: ಡಾ. ರಾಜೇಂದ್ರ ಬುರಡಿಕಟ್ಟಿ)



ರಾಷ್ಟ್ರೀಯ ವೀರ ನಾಯಕ

ಸುಭಾಷ್ ಚಂದ್ರ ಬೋಸ್

ಸುಭಾಷ್ ಚಂದ್ರ ಬೋಸ್ [ಜನನ: ಜನವರಿ 23, 1897 – ಮರಣ (ಮಾಹಿತಿ ಇಲ್ಲ)] ನೇತಾಜಿ ಎಂದೇ ಜನಪ್ರಿಯರಾಗಿದ್ದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಜನನಾಯಕರಲ್ಲಿ ಒಬ್ಬರು.

ಗಾಂಧಿಯವರು ಅಹಿಂಸಾ ಮಾರ್ಗದ ಮೂಲಕ ಸ್ವಾತಂತ್ರ್ಯ ಪಡೆಯುವ ನಿಲುವು ಹೊಂದಿದ್ದರು .ಆದರೆ ಬೋಸ್ ಅವರು ಸ್ವಾತಂತ್ರ್ಯಕ್ಕೆ ಸಶಸ್ತ್ರ ಹೋರಾಟವನ್ನೂ ಒಪ್ಪಿದ್ದರು. ಅವರ ಸಶಸ್ತ್ರ ಹೋರಾಟವು ವಿಫಲವಾದರೂ, ಭಾರತವು ಸ್ವಾತಂತ್ರ ಪಡೆಯುವಲ್ಲಿ ಜನರನ್ನು ಉತ್ತೇಜಿಸಿ ತನ್ನದೇ ಆದ ಕೊಡಿಗೆ ನೀಡಿದ್ದನ್ನು ನಿರಾಕರಿಸಲಾಗದು .

ಬೋಸ್ ಮತ್ತು ಗಾಂಧಿ ನಡುವೆ ಒಂದು ಪ್ರಸಿದ್ಧ ಮತ್ತು ಮಹತ್ವದ ಭಿನ್ನಾಭಿಪ್ರಾಯ ಇತ್ತು . 1939ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಬೋಸ್ ಅವರ ಪುನರಾಯ್ಕೆಯನ್ನು ಗಾಂಧಿ ವಿರೋಧಿಸಿದ್ದರು . ಆದರೆ ಬೋಸ್ ಅದಕ್ಕಿಂತ ಹಿಂದಿನ ಹಲವಾರು ವರ್ಷಗಳಿಂದಲೂ ಗಾಂಧಿಯ ಬಹುದೊಡ್ಡ ಅಭಿಮಾನಿಯಾಗಿದ್ದರು. ಗಾಂಧಿ ಸ್ವಾತಂತ್ರ್ಯ ಹೋರಾಟದ ಸರ್ವೋಚ್ಚ ನಾಯಕ ಎಂದು ಬೋಸ್ ಭಾವಿಸಿದ್ದರು. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಕ್ಕೆ ಮೊದಲಿನ ಪತ್ರ ವ್ಯವಹಾರದಲ್ಲಿಯೂ ಬೋಸ್ ಇದನ್ನು ಸ್ಪಷ್ಟಪಡಿಸಿದ್ದಾರೆ.

‘ನಿಮ್ಮ ಬಗ್ಗೆ ನನಗಿರುವ ಗೌರವವನ್ನು ಕಡಿಮೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ಪತ್ರವೊಂದರಲ್ಲಿ ಗಾಂಧಿಗೆ ಬೋಸ್ ಹೇಳಿದ್ದರು.

‘ಇತರರ ವಿಶ್ವಾಸ ಗೆಲ್ಲಲು ಸಾಧ್ಯವಾದರೂ ಭಾರತದ ಅತ್ಯಂತ ಶ್ರೇಷ್ಠ ವ್ಯಕ್ತಿಯ ವಿಶ್ವಾಸ ಸಿಗದಿರುವುದು ನನ್ನ ಮಟ್ಟಿಗೆ ದೊಡ್ಡ ದುರಂತ’ ಎಂದೂ ಬೋಸ್ ಬರೆದಿದ್ದರು.



ಅಹಿಂಸೆಯಲ್ಲಿ ಸಂಪೂರ್ಣ ನಂಬಿಕೆ ಇಲ್ಲದ್ದರಿಂದಲೇ ಬೋಸ್ ಅವರು ಇಂಡಿಯನ್ ನ್ಯಾಷನಲ್ ಆರ್ಮಿಯನ್ನು (ಐಎನ್‌ಎ) ಸ್ಥಾಪಿಸಿದರು. ಹಾಗಿದ್ದರೂ, ಐಎನ್‌ಎಯ ನಾಲ್ಕು ದಳಗಳಲ್ಲಿ ಮೂರು ದಳಗಳಿಗೆ ಗಾಂಧಿ, ಜವಾಹರಲಾಲ್ ನೆಹರೂ ಮತ್ತು ಮೌಲಾನಾ ಆಜಾದ್ ಅವರ ಹೆಸರು ಇರಿಸಿದ್ದರು ಎಂಬುದು ಗಮನಾರ್ಹ! ಅವರಿಗೆ ಅತಿ ಹೆಚ್ಚು ಗೌರವ ಇದ್ದದ್ದು ಮಹಾತ್ಮ ಗಾಂಧಿಯ ಬಗ್ಗೆಯೇ ಆಗಿತ್ತು.

1943ರ ಅಕ್ಟೋಬರ್ 2 ರಂದು ಗಾಂಧೀಜಿ ಜನ್ಮ ದಿನದಂದು ಬ್ಯಾಂಕಾಕ್‌ನಿಂದ ರೇಡಿಯೊದಲ್ಲಿ ಮಾತನಾಡಿದ್ದ ಬೋಸ್, 'ಅತ್ಯಂತ ಶ್ರೇಷ್ಠ ನಾಯಕ ಮಹಾತ್ಮ ಗಾಂಧಿಯ 75ನೇ ಹುಟ್ಟುಹಬ್ಬ ಇಂದು' ಎಂಬುದನ್ನು ಭಾರತೀಯ ಕೇಳುಗರಿಗೆ ನೆನಪಿಸಿದ್ದರು. ಗಾಂಧಿಯ ಕೊಡುಗೆಗಳನ್ನು ವಿವರಿಸಿದ್ದರು. 1920ರಲ್ಲಿ ಅಸಹಕಾರ ಚಳವಳಿಯನ್ನು ಅವರು ಹೇಗೆ ಆರಂಭಿಸಿದ್ದರು ಎಂಬುದನ್ನು ಹೇಳಿದರು. 'ಸ್ವಾತಂತ್ರ್ಯದ ಮಾರ್ಗವನ್ನು ತೋರುವುದಕ್ಕಾಗಿ ದೇವರೇ ಈ ವ್ಯಕ್ತಿಯನ್ನು ಕಳುಹಿಸಿದಂತೆ ತೋರುತ್ತದೆ. ತಕ್ಷಣ ಮತ್ತು ಸ್ವಯಂಪ್ರೇರಣೆಯಿಂದ ಇಡೀ ದೇಶ ಅವರ ಹಿಂದೆ ನಿಂತಿತು' ಎಂದು ಬೋಸ್ ಹೇಳಿದರು. ಗಾಂಧಿ ರಾಷ್ಟ್ರ ನಾಯಕರಾಗಿ ಬೆಳೆದ ನಂತರದ 20 ವರ್ಷಗಳ ಅವಧಿಯಲ್ಲಿ ಭಾರತೀಯರು 'ರಾಷ್ಟ್ರೀಯ ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು' ಕಲಿತರು. ಈಗ ಅವರಿಗೆ 'ಇಡೀ ದೇಶವನ್ನು ಪ್ರತಿನಿಧಿಸುವ ರಾಷ್ಟ್ರವ್ಯಾಪಿ ಸಂಘಟನೆಯೂ ಇದೆ. ಭಾರತಕ್ಕೆ ಮತ್ತು ಭಾರತದ ಸ್ವಾತಂತ್ರ್ಯಕ್ಕೆ ಗಾಂಧಿ ನೀಡಿದ ಕೊಡುಗೆ ವಿಶಿಷ್ಟ ಮತ್ತು ಪರ್ಯಾಯವಿಲ್ಲದ್ದಾಗಿದೆ. ನಮ್ಮ ರಾಷ್ಟ್ರೀಯ ಇತಿಹಾಸದಲ್ಲಿ ಎಲ್ಲ ಕಾಲದಲ್ಲಿಯೂ ಅವರ ಹೆಸರನ್ನು ಸ್ವರ್ಣಾಕ್ಷರದಲ್ಲಿಯೇ ಬರೆದಿಡಲಾಗುತ್ತದೆ' ಎಂಬುದು ಬೋಸ್ ಅವರ ಮಾತಾಗಿತ್ತು.

ಬೋಸ್ ಅವರ ಈ ಭಾಷಣದ ಸಂದರ್ಭದಲ್ಲಿ ಗಾಂಧೀಜಿ ಪುಣೆಯ ಜೈಲಿನಲ್ಲಿದ್ದರು. ರಾಷ್ಟ್ರಪಿತ ಮಹಾತ್ಮಗಾಂಧಿ ಮತ್ತು ಸುಭಾಷ್‌ಚಂದ್ರ ಬೋಸ್ ನಡುವೆ 1939ರಲ್ಲಿ ಇಬ್ಬರ ನಡುವೆ ಮೂಡಿದ್ದ ಒಡಕು ತಾತ್ಕಾಲಿಕ. ಅವರ ಒಟ್ಟು ಸಂಬಂಧವನ್ನು ಗಮನಿಸಿದರೆ ಪರಸ್ಪರರ ನಡುವೆ ಪ್ರೀತಿ, ಬಾಂಧವ್ಯ, ಗೌರವ ಕಾಣಬಹುದಾಗಿದೆ' ಎಂದು ಬೋಸ್ ಅವರ ಸಂಬಂಧಿ ಇತಿಹಾಸಕಾರ ಸುಗತ ಬೋಸ್ ಹೇಳಿದ್ದಾರೆ

ಗಾಂಧೀಜಿಯವರನ್ನು 'ರಾಷ್ಟ್ರಪಿತಾಮಹ' ಎಂದು ಮೊದಲು ಹೇಳಿದವರು ಬೋಸ್.

ಗಾಂಧೀಜಿಯವರು ಪುಣೆಯಲ್ಲಿ ಜೈಲು ಶಿಕ್ಷೆಯನ್ನು ಅನುಭವಿಸುತ್ತಿದ್ದಾಗ, ಕಸ್ತೂರಿ ಬಾ ಅವರು ಫೆಬ್ರವರಿ 22, 1944 ರಂದು ನಿಧನರಾದರು. ಗಾಂಧೀಜಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ ನೇತಾಜಿ, 1944 ರ ಜೂನ್ 4 ರಂದು ರಂಗೂನ್‌ನ ಆಜಾದ್ ಹಿಂದ್ ರೇಡಿಯೊದಲ್ಲಿ ಮಹಾತ್ಮರಿಗೆ ಈ ಕೆಳಗಿನ ಸಂದೇಶವನ್ನು ಕಳುಹಿಸಿದರು.

"........... ಸ್ವದೇಶದಲ್ಲಿರುವ ನಮ್ಮ ದೇಶವಾಸಿಗಳು ತಮ್ಮ ಸ್ವಂತ ಪ್ರಯತ್ನಗಳ ಮೂಲಕ ಅಥವಾ ಯಾವುದೇ ಆಕಸ್ಮಿಕವಾಗಿ ತಮ್ಮನ್ನು ಸ್ವತಂತ್ರಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾದರೆ ಯಾರೂ ನನಗಿಂತ ಹೆಚ್ಚು ಸಂತೋಷಪಡುದಿಲ್ಲ, ಬ್ರಿಟಿಷ್ ಸರ್ಕಾರವು ನಿಮ್ಮ 'ಕ್ವಿಟ್ ಇಂಡಿಯಾ' ಚಳವಳಿಯನ್ನು ಸ್ವೀಕರಿಸುತ್ತದೆ ಮತ್ತು ಅದಕ್ಕೆ ಪರಿಣಾಮಕಾರಿ ಉತ್ತರ ನೀಡುತ್ತದೆ ಎಂದು ಆಶಿಸುತ್ತೇನೆ. ಆದರೆ, ಮೇಲಿನ ಯಾವುದೂ ಸಾಧ್ಯವಿಲ್ಲ ಮತ್ತು ಹೋರಾಟ ಅನಿವಾರ್ಯವಾಗಿದೆ ಎಂಬ ನಂಬುಗೆಯ ಮೇಲೆ ನಾವು ಮುಂದುವರಿಯುತ್ತಿದ್ದೇವೆ. ಭಾರತದ ವಿಮೋಚನೆಗಾಗಿ ಈ ಪವಿತ್ರ ಯುದ್ಧದಲ್ಲಿ ನಮ್ಮ ರಾಷ್ಟ್ರದ ಪಿತಾಮಹ, ನಾವು ನಿಮ್ಮ ಆಶೀರ್ವಾದ ಮತ್ತು ಶುಭಾಶಯಗಳನ್ನು ಕೇಳುತ್ತೇವೆ (ಬಯಸುತ್ತೇವೆ) ".

ಮೇಲಿನ ಸಂದೇಶವು ನಿಸ್ಸಂದೇಹವಾಗಿ ನೇತಾಜಿಯವರ ರಾಷ್ಟ್ರದ ಪಿತಾಮಹ ಎಂದು ಸಂಬೋಧಿಸಿದ ಗಾಂಧೀಜಿಯವರ ಗೌರವ ಮತ್ತು ಆತ್ಮೀಯ ಭಾವನೆಗಳನ್ನು ಸಾಬೀತುಪಡಿಸುತ್ತದೆ

(ವಿಕಿಪೀಡಿಯ ಆಧಾರಿತ ಲೇಖನ)

ಗಾಂಧೀಜಿ ಬೋಸ್ ಬಗ್ಗೆ

1946ರ ಜನವರಿಯಲ್ಲಿ ಯುನೈಟೆಡ್ ಪ್ರೆಸ್ ಆಫ್ ಇಂಡಿಯಾ ಸುದ್ದಿ ಸಂಸ್ಥೆ ಜತೆ ಮಾತನಾಡುತ್ತಾ, ಇಂಡಿಯನ್ ನ್ಯಾಷನಲ್ ಆರ್ಮಿ ಯವರ 'ಜೈ ಹಿಂದ್' ಘೋಷಣೆಯನ್ನು ಕಾಂಗ್ರೆಸ್‌ಗೆ ಅಳವಡಿಸಿಕೊಳ್ಳಲಾಗುವುದು ಎಂದು ಗಾಂಧಿ ಹೇಳಿದರು. ಇದು ಯುದ್ಧದಲ್ಲಿ ಬಳಕೆಯಾಗಿದೆ ಎಂಬ ಕಾರಣಕ್ಕೆ ಈ ಘೋಷಣೆ ಹಿಂಸೆಯ ರೂಪ ಎಂದು ನಾವು ಪರಿಗಣಿಸಬೇಕಾಗಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿತ್ತು .

ಬೋಸ್ ಅವರ ಬಗ್ಗೆ ಗಾಂಧಿಯ ಅಭಿಮತ ಹೀಗಿತ್ತು. 'ತಮ್ಮ ತ್ಯಾಗದ ಸಾಮರ್ಥ್ಯ ಬೋಸ್ ಗೆ ಸದಾ ತಿಳಿದಿತ್ತು. ಅವರ ವ್ಯವಹಾರ ಚಾತುರ್ಯ, ಸೇನೆಯನ್ನು ಮುನ್ನಡೆಸುವ ತಾಕತ್ತು ಮತ್ತು ಸಂಘಟನಾ ಸಾಮರ್ಥ್ಯ ಅವರು ದೇಶ ತೊರೆದು ಹೋದ ಮೇಲಷ್ಟೇ ನನಗೆ ತಿಳಿಯಿತು. ನಮ್ಮಿಬ್ಬರ ಹೋರಾಟ ಮಾರ್ಗದ ಬಗ್ಗೆ ನನ್ನ ಮತ್ತು ಅವರ ನಡುವಣ ದೃಷ್ಟಿಕೋನದ ವ್ಯತ್ಯಾಸ ಬಹಳ ಪ್ರಸಿದ್ಧವೇ ಆಗಿದೆ'.

ಐಎನ್‌ಎಯಲ್ಲಿ ಮೇಜರ್ ಜನರಲ್ ಆಗಿದ್ದ ಷಾ ನವಾಜ್ ಖಾನ್ ಅವರನ್ನು ಬಿಹಾರಕ್ಕೆ (ಬಿಹಾರದಲ್ಲಿ ಮುಸ್ಲಿಮರು ಎದುರಿಸಿದ ಹಿಂಸೆ ಅಷ್ಟೇ ಘೋರವಾಗಿತ್ತು) ಕಳುಹಿಸಿದರು. 'ಖಾನ್ ಮತ್ತು ಐಎನ್‌ಎಯ ಇತರ ಆರು ಯೋಧರು ಮನೆಗಳು ಮತ್ತು ಗ್ರಾಮಗಳನ್ನು ಪುನರ್ ನಿರ್ಮಿಸಲು ನಿರಾಶ್ರಿತ ಮುಸ್ಲಿಮರಿಗೆ ನೆರವಾದರು.ಷಾ ನವಾಜ್ ಸಾಹೇಬ್ ಅವರು ಅತ್ಯುತ್ತಮ ಕೆಲಸ ಮಾಡುತ್ತಿದ್ದಾರೆ' ಎಂದು ಬಿಹಾರದ ಪ್ರಾರ್ಥನಾ ಸಭೆಯೊಂದರಲ್ಲಿ ಗಾಂಧಿ ಹೇಳಿದ್ದರು. ಷಾ ನವಾಜ್ ಮತ್ತು ಐಎನ್‌ಎಯ ಮಾಜಿ ಯೋಧರ ತಂಡ ಗಲಭೆ ಸಂತ್ರಸ್ತರಿಗೆ ಹೇಗೆ ಆಹಾರ ವಿತರಿಸಿತು ಎಂಬುದನ್ನೆಲ್ಲ ಗಾಂಧಿ ವಿವರಿಸಿದರು.

1938 ರಲ್ಲಿ ಗುಜರಾತ್ ರಾಜ್ಯದ ಸೂರತ್ ಜಿಲ್ಲೆಯ ಹರಿಪುರದಲ್ಲಿ ಫೆಬ್ರವರಿ 19ರಿಂದ 22ರ ವರೆಗೆ 51ನೇ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನ ಮಹಾ ಅಧಿವೇಶನ ಜರುಗಿತು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಅಣತಿಯಂತೆ ಸುಭಾಷ್ ಚಂದ್ರ ಬೋಸ್ ಅವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾದರು ಬಾಪೂ – ಬೋಸ್ ಇಬ್ಬರ ನಡುವಿನ ದೃಷ್ಟಿ ಭೇದ ಇದ್ದರೂ ಮೂಲ ಸ್ವಭಾವ ಒಂದೇಆಗಿತ್ತು ; ಇಬ್ಬರೂ ಆಧ್ಯಾತ್ಮಿಕ ಭಾವವುಳ್ಳವರಾಗಿದ್ದರು . ಒಬ್ಬರೊಬ್ಬರನ್ನು ಅತೀ ಹೆಚ್ಚು ಗೌರವಿಸುತ್ತಿದ್ದರು. ಜಗತ್ತಿಗೆ ಗೊತ್ತಿರುವ ಹಾಗೆ ಇಬ್ಬರ ನಡುವೆ ಅಭಿಪ್ರಾಯ ಭಿನ್ನತೆಯಿದ್ದರೂ ಅವರ ಅಭಿಪ್ರಾಯ ಭೇದ ಎಂದೂ ವೈಯಕ್ತಿಕವಾಗಿರಲಿಲ್ಲ.

ಅವರ ನಡುವಿನ ಬಂಧ ಎಷ್ಟು ಗಟ್ಟಿ ಆಗಿತ್ತೆಂದರೆ, ಏಪ್ರಿಲ್ 08.1946 ರಲ್ಲಿ ' ಚಿಕಾಗೋ ಟ್ರಿಬ್ಯೂನ್ ' ಜರ್ನಲ್ ರಿಪೋರ್ಟರ್' ಅಲ್ಫ್ರೆಡ್ ವೆಜ್ ' ದಾಖಲು ಮಾಡಿರುವಂತೆ – ಸುಭಾಷ್ ಚಂದ್ರ ಬೋಸ್ ಅವರ ಸಂಬಂಧಿ ಶರತ್ ಬೋಸ್ ಅವರಿಗೆ ಗಾಂಧಿ ಹೀಗೆ ಹೇಳಿದ್ದರು . 'ನನ್ನ ಒಳದನಿ ಹೇಳುತ್ತದೆ ಸುಭಾಸ್ ಅವರಿಗೆ ಶ್ರಾದ್ಧ ಮಾಡಬೇಡಿ. Netaji Was Still Alive'

ಬಾಪೂಜಿಗೆ ಸುಭಾಸ್ 'ನೇತಾಜಿ' ಯಾದರು

1943ರಲ್ಲಿ ಪುಣೆಯ ಜೈಲಿನಲ್ಲಿರುವಾಗ ಇಂಗ್ಲಿಷ್ ಪತ್ರಕರ್ತನಿಗೆ ಗಾಂಧೀಜಿ ಸಂದರ್ಶನ ನೀಡುವಾಗ ' ಸುಭಾಷ್ ಬಾಬು , 'ದೇಶಭಕ್ತರ ದೊರೆ ' – ' ದೇಶಭಕ್ತರ ಕಿರೀಟ ' ಎಂದು ಅಭಿಮಾನದಿಂದ ಕರೆದರು. ಇನ್ನೊಂದು ಸಂದರ್ಭದಲ್ಲಂತೂ ಹೃದಯ ತುಂಬಿ ಮಾತನಾಡುತ್ತ, ' ಸುಭಾಷ್ ಬಾಬು ನನ್ನ ನಾಲ್ಕು ಜನ ಸುಪುತ್ರರಿಗಿಂತ ಶ್ರೇಷ್ಠ ' ಎಂದರು ಮಹಾತ್ಮ.

ಇನ್ನೊಂದು ಸಂದರ್ಶನದಲ್ಲಿ ಪತ್ರಕರ್ತನ ಜೊತೆ ಮಾತನಾಡುವಾಗ –

ಸುಭಾಷ್ ನಿಜವಾದ ನೇತಾ (ಸುಪ್ರೀಂ ಲೀಡರ್) ದೇಶದ ಸ್ವಾತಂತ್ರ್ಯಕ್ಕಾಗಿ ಅಮೂಲ್ಯ ಜೀವನವನ್ನು ಮುಡುಪಾಗಿಟ್ಟಿದ್ದಾರೆ ಎಂದು ಅಭಿಮಾನದಿಂದ ನುಡಿದರು,

ಮುಂದೆ ಜರ್ಮನಿಯಲ್ಲಿ ಇಂಡಿಯನ್ ನ್ಯಾಷನಲ್ ಆರ್ಮಿ ' INA ಸೈನಿಕರು ನೇತಾ ಪದಕ್ಕೆ 'ಜಿ' ಸೇರಿಸಿ ಪ್ರಚುರ ಪಡಿಸಿದರು. ಈಗದು 'ನೇತಾಜಿ' ನಮ್ಮೆಲ್ಲರ ಹೃದಯದಲ್ಲಿದೆ.

ಅಮೇರಿಕೆಯ ಪತ್ರಕರ್ತ ಲೂಯಿ ಫಿಷರ್ ಜೊತೆಗೆ ಮಾತನಾಡುವಾಗ ಮಹಾತ್ಮ – 'Patriot Of Patriots' **'ದೇಶಭಕ್ತರ ದೇಶಭಕ್ತ ಸುಭಾಸ್'** ಎಂದು ಕರೆದರು. ಅದು 1942ರ ಮೇ ತಿಂಗಳಲ್ಲಿ ಮಹಾರಾಷ್ಟ್ರದ ವಾರ್ಧಾ ಆಶ್ರಮದಲ್ಲಿ ಭೇಟಿಯಾದಾಗ (A Week With Mahatma Gandhi Louis Book)

ನೇತಾಜಿಗೆ ಗಾಂಧೀಜಿ ಆದರು 'ರಾಷ್ಟ್ರಪಿತ'. 'Father Of The Nation' ..

1944 ನೇ ಇಸ್ವಿ ಜುಲೈ 06 ರಂದು ದೂರದ ರಂಗೂನ್ ನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ, INA ಸೈನಿಕರಿಗೆ ಮಾತನಾಡುವಾಗ ಮಹಾತ್ಮ ಗಾಂಧಿ 'ಫಾದರ್ ಆಫ್ ದ ನೇಷನ್' ಎಂದು ಕರೆದು ಗೌರವಿಸಿದರು ಬೋಸ್.


ಅವರ ಮಾತುಗಳನ್ನು ಆಜಾದ್ ಹಿಂದ್ ರೇಡಿಯೋ ಪ್ರಸಾರ ಮಾಡಿತು. ಭಾರತದ 'ಅತ್ಯುಚ್ಚ ಕೋಟಿ ಜನ ನಾಯಕ' ಬಾಪೂ ಎಂದು ಇನ್ನೊಂದು ಸಂದರ್ಭದಲ್ಲಿ ಕರೆದರು ಸುಭಾಸ್.

ತಾವು ಸೃಜಿಸಿದ ಇಂಡಿಯನ್ ನ್ಯಾಷನಲ್ ಆರ್ಮಿಯ ನಾಲ್ಕು ದಳಗಳಲ್ಲಿ ಒಂದು ದಳಕ್ಕೆ ಗಾಂಧಿ ಬ್ರಿಗೇಡ್ ಎಂದು ಹೆಸರಿಟ್ಟಿದ್ದರು.ಎರಡನೇ ದಳಕ್ಕೆ ನೆಹರೂ ಬ್ರಿಗೇಡ್, ಮೂರನೇ ದಳಕ್ಕೆ ಆಜಾದ್ ಬ್ರಿಗೇಡ್ , ನಾಲ್ಕನೆಯದಕ್ಕೆ ಸುಭಾಸ್ ಬ್ರಿಗೇಡ್ ಎಂದು ಹೆಸರಿಸಿದ್ದರು .

ಇನ್ನೊಂದು ಮಹಿಳಾ ಬ್ರಿಗೇಡ್‌ನ್ನು ಸೃಷ್ಟಿಸಿ ಜಾನ್ಸಿ ರೆಜಿಮೆಂಟ್ ಅಂತ ಹೆಸರಿಟ್ಟು ಅದರ ಮುಂದಾಳತ್ವವನ್ನು ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ (ಮೂಲ ಹೆಸರು ಲಕ್ಷ್ಮೀ ಸಾಮಿನಾಥನ್) ಅವರಿಗೆ ವಹಿಸಿಕೊಟ್ಟರು.

'ಭರತ ವರ್ಷಕ್ಕೆ ಮಹಾತ್ಮ ಆತ್ಮವಾದರೆ, ನೇತಾಜಿ ರಕ್ತ ಮಾಂಸ'

(ಸಂಗ್ರಹ : ನೇತಾಜಿ ಗಾಂಧಿ)



ಗಾಂಧಿ, ಗೋಡ್ಸೆ ಮತ್ತು ಕ್ಷಮೆ

–ಬಿ ಎಂ ಹನೀಫ್

ಅದು 1948ರ ಜನವರಿ 30. ದೇಶಕ್ಕೆ ಸ್ವಾತಂತ್ರ್ಯ ಬಂದು ಇನ್ನೂ 5 ತಿಂಗಳಾಗಿತ್ತು ಅಷ್ಟೆ. ಮಹಾತ್ಮಾ ಗಾಂಧೀಜಿ ನವದೆಹಲಿಯ ಹೃದಯಭಾಗದಲ್ಲಿ ಬಿರ್ಲಾ ಹೌಸ್‌ನಲ್ಲಿದ್ದರು. ಅದೊಂದು ದೊಡ್ಡ ಬಂಗಲೆ. ಅಲ್ಲೇ ಒಂದು ಕೋಣೆಯಲ್ಲಿ ಗಾಂಧಿ ಉಳಿದುಕೊಂಡಿದ್ದರು. ಸಂಜೆ ಐದರ ಇಳಿಹೊತ್ತು. ಅದು ಗಾಂಧೀಜಿಯವರ ಸರ್ವಧರ್ಮ ಪ್ರಾರ್ಥನೆಯ ಹೊತ್ತು. ಅದಕ್ಕಾಗಿಯೇ ಅವರು ಕೋಣೆಯಿಂದ ಹೊರಬಂದಿದ್ದರು. ಒಮ್ಮೆ ತುಂಬಿದ ಸಭೆಯತ್ತ ನೋಡಿದರು. ಎಂದಿನಂತೆ ತಮ್ಮ ದತ್ತುಪುತ್ರಿ ಅಭಾಬೆನ್ ಮತ್ತು ಮನುಬೆನ್ ಅವರ ಹೆಗಲ ಮೇಲೆ ಕೈಗಳನ್ನು ಇಟ್ಟುಕೊಂಡು ಅವರು ನಿಧಾನಕ್ಕೆ ನಡೆಯುತ್ತಾ ಜನರ ಗುಂಪಿನತ್ತ ಬಂದರು. ಅಲ್ಲೊಂದು ಪುಟ್ಟ ಡಯಾಸ್ ಇತ್ತು. ಅಲ್ಲಿ ಕುಳಿತು ಅವರು ಪ್ರತಿದಿನ ಸಂಜೆ ಸರ್ವಧರ್ಮ ಪ್ರಾರ್ಥನೆಯನ್ನು ನಡೆಸುತ್ತಿದ್ದರು. ಆ ಡಯಾಸ್‌ನ ಮೆಟ್ಟಿಲುಗಳನ್ನು ಅವರು ಏರಲು ತೊಡಗಿದರು.

ಹಠಾತ್ತಾಗಿ ಗುಂಪಿನ ಒಳಗಿನಿಂದ ಒಬ್ಬ ಎಲ್ಲರನ್ನೂ ಪಕ್ಕಕ್ಕೆ ತಳ್ಳಿ ಗಾಂಧೀಜಿಯ ಎದುರಿಗೇ ಬಂದು ಅಡ್ಡ ನಿಂತ. ಅವನ ಕೈಯಲ್ಲಿದ್ದ ಪಿಸ್ತೂಲ್ ಗಾಂಧೀಜಿಯ ಎದೆಗೆ ಗುರಿ ಇಟ್ಟಿತ್ತು. ಅದು ಬೆರೆಟ್ಟಾ ಎಂ 1934 ಸೆಮಿ ಅಟೊಮ್ಯಾಟಿಕ್ ಪಿಸ್ತೂಲ್. ಎಲ್ಲರೂ ಏನಾಗುತ್ತಿದೆ ಎಂದು ಯೋಚಿಸುವುದರೊಳಗೆ ಕ್ಷಣ ಮಾತ್ರದಲ್ಲಿ ಪಿಸ್ತೂಲಿನಿಂದ ಮೂರು ಗುಂಡುಗಳು ಹಾರಿದವು. ಎರಡು ನೇರ ಎದೆಗೆ ಮತ್ತು ಒಂದು ಗಾಂಧೀಜಿಯ ಹೊಟ್ಟೆಗೆ. ಗಾಂಧಿ ನೆಲಕ್ಕೆ ಕುಸಿದು ಬಿದ್ದರು.

ಜೀವನಪೂರ್ತಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ 78 ವರ್ಷ ವಯಸ್ಸಿನ ವಯೋವೃದ್ಧ ಗಾಂಧಿಯನ್ನು ಹಾಡುಹಗಲೇ ಬರ್ಬರವಾಗಿ ಕೊಲೆಗೈದವನ ಹೆಸರು ನಾಥೂರಾಮ್ ಗೋಡ್ಸೆ. ಪುಣೆಯ ಬಲಪಂಥೀಯ ಉಗ್ರವಾದಿ. ಆರೆಸೆಸ್ ಮತ್ತು ಹಿಂದೂ ಮಹಾಸಭಾದ ಕಾರ್ಯಕರ್ತ. ಗಾಂಧೀಜಿ ವಿಚಾರಗಳ ಮೇಲಿನ ದ್ವೇಷದಿಂದ ಹೀಗೆ ಗುಂಡಿಕ್ಕಿದಾಗ ಆತನ ಪ್ರಾಯ ಇನ್ನೂ 38 ವರ್ಷ. ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ನಾಥೂರಾಮ್ ವಿನಾಯಕರಾವ್ ಗೋಡ್ಸೆ, ಮನಸ್ಸಿನಲ್ಲಿ ಯೌವನದಿಂದಲೇ ಗಾಂಧಿ ದ್ವೇಷವನ್ನು ವ್ಯವಸ್ಥಿತವಾಗಿ ತುಂಬಿಸಲಾಗಿತ್ತು.

ತನ್ನ ಎದೆಗೆ ಮತ್ತು ಹೊಟ್ಟೆಗೆ ಪಾಯಿಂಟ್ ಬ್ಲಾಂಕ್ ಆಗಿ ಗೋಡ್ಸೆ ಒಂದರ ಹಿಂದೆ ಒಂದರಂತೆ ಮೂರು ಗುಂಡುಗಳನ್ನು ಹಾರಿಸಿದಾಗ ಗಾಂಧಿ ನೆಲಕ್ಕೆ ಕುಸಿದುಬಿದ್ದರು. ಅವರ ಬಾಯಿಯಿಂದ ಹೇ ರಾಮ್ ಎನ್ನುವ ಕೂಗು ಆಯಾಚಿತವಾಗಿ ಹೊರಬಂತು. ಜನರು ಓಡಿಬಂದು ಅವರನ್ನು ಎತ್ತಿಕೊಂಡು ಅವರ ಕೋಣೆಯತ್ತ ಕರೆದೊಯ್ದರು.

ಕೋಣೆಯೊಳಗೆ ಗಾಂಧಿಯವರ ದೇಹವನ್ನು ಎತ್ತಿಕೊಂಡು ತರಲು ಹತ್ತು




ನಿಮಿಷ ಹಿಡಿಯಿತು. ಅಲ್ಲಿ ಯಾವ ವೈದ್ಯರೂ ಇರಲಿಲ್ಲ. ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ಇತ್ತು. ಆದರೆ ಅದರೊಳಗೆ ಯಾವ ಔಷಧಿಗಳೂ ಇರಲಿಲ್ಲ. ಅಕ್ಷರಲ್ಲಾಗಲೇ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು.

ಗಾಂಧಿಯವರ ಪ್ರಾಣಕ್ಕೆ ಅಪಾಯ ಇತ್ತು ಎನ್ನುವ ಸುಳಿವು ಸರಕಾರಕ್ಕೆ ಇರಲಿಲ್ಲವೇ? ಖಂಡಿತವಾಗಿಯೂ ಇತ್ತು. ಅಂದಿನ ಸಭೆಯಲ್ಲಿ ಕೆಲವು ಸಶಸ್ತ್ರ ಕಾವಲುಗಾರರೂ ಇದ್ದರು. ಗಾಂಧಿ ಅವತ್ತು ಪ್ರಾರ್ಥನಾ ಸಭೆಗೆ ಹತ್ತು ನಿಮಿಷ ತಡವಾಗಿ ಆಗಮಿಸಿದ್ದರು. ಅವರು ಬರುವಾಗ ಸಭೆಯಲ್ಲಿ ಕೆಲವೇ ಜನರಿದ್ದರು. ಆದರೆ ಬಂದ ಬಳಿಕ ಗುಂಪು ದೊಡ್ಡದಾಯಿತು. ಶಾಲಾ ಮಕ್ಕಳು, ಜಾಡಮಾಲಿಗಳು, ಸಶಸ್ತ್ರ ಪಡೆಯ ನೌಕರರು, ಉದ್ಯಮಿಗಳು, ಸಾಧುಗಳು ಮತ್ತು ಹಲವು ಸಣ್ಣ ವ್ಯಾಪಾರಿಗಳೂ ಅಲ್ಲಿದ್ದರು.

ಅವತ್ತು ಗೋಡ್ಸೆ ಖಾಕಿ ಡ್ರೆಸ್ ಹಾಕಿಕೊಂಡಿದ್ದ. ಆತ ಗುಂಪಿನಿಂದ ನುಗ್ಗಿ ಮುಂದಕ್ಕೆ ಗಾಂಧಿ ಬಳಿಗೆ ಬಂದಾಗ ಮನುಬೆನ್ ಆತನನ್ನು ಹಿಂದಕ್ಕೆ ತಳ್ಳಲು ಯತ್ನಿಸಿದರು. ಈಗಾಗಲೆ ಬಾಪೂ ಹತ್ತು ನಿಮಿಷ ತಡವಾಗಿ ಬಂದಿದ್ದಾರೆ. ಯಾಕೆ ಕಿರಿಕಿರಿ ಮಾಡ್ತೀಯ ಎಂದೂ ಅವರು ಹೇಳಿದರು. ಆತ ಕೈ ಮುಗಿಯುತ್ತಾ ಮುಂದೆ ಬಂದು ಬಾಗಿದ. ಬಹುಶಃ ಗಾಂಧಿಯವರ ಆಶೀರ್ವಾದ ಪಡೆಯಲು ಬಂದಿರಬೇಕು ಎಂದು ಮನುಬೆನ್ ಅಂದುಕೊಂಡಿದ್ದರು. ಗೋಡ್ಸೆ ತಳ್ಳಿದ ರಭಸಕ್ಕೆ ಮನು ಬೆನ್ ▯ಯತಪ್ಪಿ ಅವರ ಕೈಯಲ್ಲಿದ್ದ ನೋಟ್ ಬುಕ್ ಮತ್ತು ಲೆಕ್ಕಣಿಕೆ ಕೆಳಗೆ ಬಿದ್ದವು. ಅದನ್ನು ಹೆಕ್ಕಲು ಅವರು ನೆಲದತ್ತ ಹಿಂದೆ ಸರಿದರು. ಅಕ್ಷರಲ್ಲಾಗಲೇ ಗುಂಡು ಹಾರಿದ ಸದ್ದು ಕೇಳಿಸಿತು. ಮನು ಬೆನ್ ಪ್ರಕಾರ ಒಟ್ಟು ನಾಲ್ಕು ಗುಂಡುಗಳು ಹಾರಿದ್ದವು.

ಗೋಡ್ಸೆ ಮತ್ತು ಸಂಗಡಿಗರು ಗಾಂಧಿಯನ್ನು ಕೊಲ್ಲಲು ಹಿಂದೆಯೂ ಪ್ರಯತ್ನ ನಡೆಸಿದ್ದರು. ಅದು ಸರಕಾರಕ್ಕೂ ಗೊತ್ತಿತ್ತು.

1944ರ ಮೇ ತಿಂಗಳಲ್ಲಿ ಒಮ್ಮೆ ಇದೇ ನಾಥೂರಾಮ್ ಗೋಡ್ಸೆ ಗಾಂಧಿಯನ್ನು ಕೊಲ್ಲಲು ಚೂರಿ ಹಿಡಿದುಕೊಂಡು ಬಂದಿದ್ದ. ಅವನ ಜೊತೆಗೆ 15–20 ತರುಣರಿದ್ದರು. ಅವತ್ತು ಪಾಂಚ್‌ಗನಿಯಲ್ಲಿ ಗಾಂಧಿಯ



ಪ್ರಾರ್ಥನಾ ಸಭೆಯ ನಡೆದಿತ್ತು. ಅಲ್ಲಿದ್ದ ಜನರ ಗುಂಪು ಗೋಡ್ಸೆ ಮತ್ತು ಗುಂಪನ್ನು ತಡೆದು, ಹಿಡಿದು ನಿಲ್ಲಿಸಿದ್ದರು. ವಿಷಯ ಗೊತ್ತಾದಾಗ ಗಾಂಧಿ ತಮ್ಮ ಕ್ಷಮಾಗುಣದ ಮೊರೆ ಹೋದರು. ಗೋಡ್ಸೆ ಮತ್ತು ಆತನ ಸಂಗಡಿಗರನ್ನು ಕ್ಷಮಿಸಿ, ಹೋಗಲು ಬಿಡಿ ಎಂದು ಆದೇಶಿಸಿದರು.

1944ರ ಸೆಪ್ಟೆಂಬರ್‌ನಲ್ಲಿ ಇನ್ನೊಮ್ಮೆ ನಾಥೂರಾಮ್ ಗೋಡ್ಸೆ ಗಾಂಧಿಯ ಕೊಲೆ ಪ್ರಯತ್ನಕ್ಕೆ ಇಳಿದಿದ್ದ. ಸೇವಾಗ್ರಾಮದಿಂದ ಮುಂಬೈಗೆ ಹೊರಟಿದ್ದ ಗಾಂಧಿಯ ಯಾತ್ರೆಯನ್ನು ತಡೆಯಲು ಗುಂಪಿನ ಜೊತೆಗೆ ಬಂದಿದ್ದ. ಆತನ ಕೈಯಲ್ಲಿ ಡ್ರಾಗರ್ ಇತ್ತು. ಪೊಲೀಸರು ಆತನನ್ನು ಬಂಧಿಸಿದಾಗ ಗಾಂಧಿಯನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಆತ ಕೂಗಾಡುತ್ತಿದ್ದ. ಪೊಲೀಸರು ಆತನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿದರು. ಆದರೆ ಗಾಂಧೀಜಿ ಎಂದಿನಂತೆ ತಮ್ಮ ಕ್ಷಮಾಗುಣದ ನೀತಿಯನ್ನು ಪುನರುಚ್ಚರಿಸಿದರು. ಆತನನ್ನು ಕ್ಷಮಿಸಿದ್ದೇನೆ, ಬಿಟ್ಟು ಬಿಡಿ ಎಂದರು!

ಈ ಮಧ್ಯೆ ದೇಶದ ಸ್ವಾತಂತ್ರ್ಯ ಹೋರಾಟ ಮತ್ತು ವಿಭಜನೆಯ ಸಂಕಷ್ಟಗಳು ಎದುರಾದವು. ದೇಶ ಇಬ್ಭಾಗವಾಯಿತು. ವಿಭಜನೆಯ ವಲಸೆ, ಪರಸ್ಪರ ಹಿಂದೂ – ಮುಸ್ಲಿಂ ರಕ್ತಪಾತಗಳು ಘಟನೆಗಳು ನಡೆದವು. ವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನದ ಕೆಲವು ಷರತ್ತುಗಳಿಗೆ ಒಪ್ಪಿದ ಗಾಂಧೀಜಿ ವಿರುದ್ಧ ನಾಥೂರಾಮು ಗೋಡ್ಸೆ ಬಹಿರಂಗವಾಗಿಯೇ ಕೆಂಡ ಕಾರತೊಡಗಿದ. ಗಾಂಧೀಜಿ ಹಿಂದೂ ವಿರೋಧಿ ಎನ್ನುವುದು ಅವರ ವಾದವಾಗಿತ್ತು.

1948ರ ಜನವರಿ 30 ಕ್ಕೂ ಮುನ್ನವೇ 20ನೇ ತಾರೀಖಿನಂದು ಕೂಡಾ ಗಾಂಧಿಯ ಕೊಲೆಗೆ ಗೋಡ್ಸೆ ಮೂರನೇ ಪ್ರಯತ್ನವನ್ನು ನಡೆಸಿದ್ದ! ಗಾಂಧಿ ಆಗ ನವದೆಹಲಿಯ ಉತ್ತರ ಭಾಗದ ವಾಲ್ಮೀಕಿ ದೇವಾಲಯದಲ್ಲಿ ಉಳಿದುಕೊಂಡಿದ್ದರು. ಅಲ್ಲೇ ಸರ್ವಧರ್ಮ ಪ್ರಾರ್ಥನಾ ಸಭೆ ನಡೆಸುತ್ತಿದ್ದರು. ದೊಡ್ಡ ಸಂಖ್ಯೆಯಲ್ಲಿ ಆಗ ಪಾಕಿಸ್ತಾನದಿಂದ ದೆಹಲಿಗೆ ನಿರಾಶ್ರಿತರು ಬರುತ್ತಿದ್ದರು. ಆ ನಿರಾಶ್ರಿತರು ಉಳಿದುಕೊಳ್ಳಲು ಜಾಗ ನೀಡಬೇಕೆಂದು ಅಧಿಕಾರಿಗಳು ಮನವಿ ಮಾಡಿಕೊಂಡಾಗ ಒಪ್ಪಿದ ಗಾಂಧಿ ಅಲ್ಲಿಂದ ಬಿರ್ಲಾ ಹೌಸ್‌ಗೆ ತೆರಳಿದರು. ಬಿರ್ಲಾ ಹೌಸ್‌ನ ಹಿಂಭಾಗದ ಎತ್ತರ ಹುಲ್ಲುಹಾಸಿನಲ್ಲಿ ತಮ್ಮ ಪ್ರಾರ್ಥನಾ ಸಭೆಗಳನ್ನು ಮುಂದುವರಿಸಿದರು.

ಅವತ್ತು ಪಾರ್ಕ್‌ನಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಲು ಗಾಂಧಿ ಪುಟ್ಟ ವೇದಿಕೆಯ ಮೇಲಿದ್ದರು. ನಾಥೂರಾಂ ಗೋಡ್ಸೆ ಮತ್ತು ಅವನ ಸಹಚರರ ಗುಂಪು ಗಾಂಧಿಯವರನ್ನು ಹಿಂಬಾಲಿಸಿತ್ತು. ಗಾಂಧಿ ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಗುಂಪಿನಲ್ಲಿದ್ದ ಗೋಡ್ಸೆ ಸಹಚರನೊಬ್ಬ ವೇದಿಕೆಯ ಮೇಲೆ ಕೈಬಾಂಬ್ ಎಸೆದ. ದೊಡ್ಡ ಶಬ್ದದೊಂದಿಗೆ ಸ್ಫೋಟ ಸಂಭವಿಸಿತು. ದಟ್ಟ ಹೊಗೆ ಆವರಿಸಿತು. ಜನರು ಗಾಬರಿಯಿಂದ ಚೀತ್ಕರಿಸುತ್ತಾ ದಿಕ್ಕಾಪಾಲಾಗಿ ಓಡಿದರು. ವೇದಿಕೆಯ ಮೇಲೆ ಗಾಂಧಿ ಒಬ್ಬರೇ ನಿಂತಿದ್ದರು. ಗೋಡ್ಸೆಯ ಪ್ಲಾನ್ ಪ್ರಕಾರ ಅವ ಜೊತೆಗಿದ್ದ ದಿಗಂಬರ ಬಡ್ಗೆ ಗಾಂಧಿ ಮೇಲೆ ಇನ್ನೊಂದು ಕೈಬಾಂಬ್ ಎಸೆಯಬೇಕಾಗಿತ್ತು. ಆದರೆ ದಿಗಂಬರ ಬಡ್ಗೆ ಹೆದರಿಹೋಗಿದ್ದ, ಕೈಲಿದ್ದ ಬಾಂಬನ್ನು ಅಲ್ಲೇ ಬಿಸುಟು ಅಲ್ಲಿಂದ ಓಡಿಹೋಗಿದ್ದ. ಗೋಡ್ಸೆಯೂ ಪರಾರಿಯಾದ. ದೇಶವಿಭಜನೆಯ ಸಂದರ್ಭದಲ್ಲಿ ಭಾರತಕ್ಕೆ ವಲಸೆ ಬಂದಿದ್ದ ಮದನ್‌ಲಾಲ್ ಪಾಹ್ವಾ ಎಂಬ ಒಬ್ಬಾತ ಮಾತ್ರ ಪೊಲೀಸರ ಕೈಗೆ ಸಿಕ್ಕಿಬಿದ್ದ.

ಅದಾಗಿ ಹತ್ತೇ ದಿನಗಳಲ್ಲಿ ಜನವರಿ 30 ರಂದು ನಾಥೂರಾಮ್ ಗೋಡ್ಸೆ ತನ್ನ ಸೇಡು ತೀರಿಸಿಕೊಂಡ. ಕೊಲೆಗಡುಕನ ಪಿಸ್ತೂಲಿಗೆ ಗುಂಡಿಗೆ ಬಲಿಯಾಗಿ ಗಾಂಧೀಜಿ ಕೊಲೆಯಾದರು. ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದ್ದ ಅಹಿಂಸೆಯ ದೂತ ಗಾಂಧಿ ಎಂಬ ಹೆಮ್ಮರವೊಂದು ಧರೆಗೆ ಉರುಳಿತು. ■



ಗಣರಾಜ್ಯೋತ್ಸವ ಶುಭಾಶಯಗಳು

– ವಿವೇಕಾನಂದ. ಎಚ್. ಕೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ತಾಯಿ ನೆಲವನ್ನು ಸ್ಮರಿಸುತ್ತಾ........

ನಾನು ಹಿಂದೂ

ನಾನು ಮುಸ್ಲಿಂ,

ನಾನು ಸಿಖ್,

ನಾನು ಕ್ರಿಶ್ಚಿಯನ್,

ನಾನು ಬೌದ್ಧ,

ನಾನು ಜೈನ,

ನಾನು ಲಿಂಗಾಯತ,

ನಾನು ಒಕ್ಕಲಿಗ,

ನಾನು ದಲಿತ.

ನಾನು ಠಾಕೂರ್,

ನಾನು ಮರಾಠ,

ನಾನು ಪಟೇಲ್,

ನಾನು ಜಾಟ್,

ನಾನು ನಾಯರ್,

ನಾನು ನಂಬೂದಿರಿ,

ನಾನು ಅಯ್ಯರ್,

ನಾನು ಕಮ್ಮ.......

ಇಲ್ಲ ನೀವು ಈ ಎಲ್ಲವನ್ನೂ ಮೀರಿ ಮೊದಲು ಭಾರತೀಯರು....

We the people of India.........

ಹೀಗೆ ಹೇಳಿದ್ದು ಭಾರತ ಗಣರಾಜ್ಯಗಳ ಒಕ್ಕೂಟದ ಸಂವಿಧಾನ......

ವೇದ ಉಪನಿಷತ್ತುಗಳು, ಭಗವದ್ಗೀತೆ – ಖುರಾನ್ – ಬೈಬಲ್ – ಗ್ರಂಥ ಸಾಹಿಬ್ – ಬುದ್ದ ಜ್ಞಾನ – ಜೈನ ಪಂಥ – ಬಸವ ತತ್ವ – ಶೈವ ಪಂಥ – ದ್ವೈತ – ಅದ್ವೈತ – ವಿಶಿಷ್ಟಾದ್ವೈತ ಎಲ್ಲವನ್ನೂ ಒಳಗೊಂಡ ಆದರೆ ಎಲ್ಲವನ್ನೂ ಸಂಕಲಿಸಿದ – ಎಲ್ಲವನ್ನೂ ಸಮೀಕರಿಸಿದ ಪರ್ಯಾಯ ಮಾರ್ಗವೇ ಸಂವಿಧಾನ.....

ಧರ್ಮಗಳ ಕೊಳೆಯನ್ನು ತೊಳೆದು ಹೊಳಪು ನೀಡಿ ಸಮಾನತೆ ಸ್ವಾತಂತ್ರ್ಯ ಎಂಬ ಹೊಸ ನಾಗರಿಕ ಲಕ್ಷಣಗಳ ಆಧುನಿಕ ರೂಪವೇ ಸಂವಿಧಾನ...

ಜನರನ್ನು ಶ್ರೇಷ್ಠತೆಯ ವ್ಯಸನದ ಭ್ರಮೆಗಳಿಗೆ ಒಳಪಡಿಸುವ ಧರ್ಮಗಳು, ಆಚರಣೆಗಳ ಮೂಲಕ ವಿಭಜಿಸುವ ಧರ್ಮಗಳು, ಹುಟ್ಟಿನ ಆಧಾರದ ಮೇಲೆ ಬೇರ್ಪಡಿಸುವ ಜಾತಿಗಳು, ಇವುಗಳಿಗೆ ಬದಲಾವಣೆ ತಂದು ಮನುಷ್ಯತ್ವದ ಆಧಾರದ ಮೇಲೆ ಒಂದು ಗೂಡಿಸುವ ವಿಧಿ ವಿಧಾನಗಳೇ – ನೀತಿ ನಿಯಮಗಳೇ ಸಂವಿಧಾನ......

ಬಹುತ್ವ ಭಾರತ ಬಲಿಷ್ಠ ಭಾರತ ಆಶಯವನ್ನು ವಾಸ್ತವದಲ್ಲಿ ನಿಜವಾಗಿಸಲು ಇರುವ ಅತ್ಯುತ್ತಮ ಮಾರ್ಗ ಸಂವಿಧಾನ.....

ಯಾವ ದೃಷ್ಟಿಕೋನದಿಂದ ನೋಡಿದರು ಭಾರತದಲ್ಲಿ ಮನುಷ್ಯ ಪ್ರೀತಿಯ ಸಂಕೇತ ಸಂವಿಧಾನ ಮಾತ್ರ......

ಇಂತಹ ಸಂವಿಧಾನವನ್ನು ಅಳವಡಿಸಿಕೊಂಡು ಅದನ್ನು ಸಂಭ್ರಮದಿಂದ ಜಾರಿ ಮಾಡಿ ಗಣರಾಜ್ಯಗಳ ಒಕ್ಕೂಟವಾದ

ನೆನಪಿನ ದಿನ ಜನವರಿ 26.......

ಸಂವಿಧಾನವೇ ಧರ್ಮವಾದ, ಜಗತ್ತಿನ ಅತ್ಯಂತ ದೊಡ್ಡ ಪ್ರಜಾಸತ್ತಾತ್ಮಕ ಮತ್ತು ವೈವಿಧ್ಯಮಯ ದೇಶ ಭಾರತ. ಅದನ್ನು ವರ್ಣಿಸುವುದೇ ಒಂದು ಹೆಮ್ಮೆ.......

ಜೀವ ನೀಡಿದ ಜನ್ಮಭೂಮಿಯೆ,

ನಿನಗಿದೋ ಬಹುದೊಡ್ಡ ಸಲಾಂ......

ಎಷ್ಟೊಂದು ಅದ್ಭುತ, ಆಶ್ಚರ್ಯ, ವೈವಿಧ್ಯತೆಗಳ ಮಡಿಲು ನಿನ್ನದು.......

ನಿನ್ನಲ್ಲಿರುವ ಜಾತಿಗಳೆಷ್ಟೋ, ಧರ್ಮಗಳೆಷ್ಟೋ, ದೇವರುಗಳೆಷ್ಟೋ,......

ನಿನ್ನಲ್ಲಡಗಿರುವ ಭಾಷೆಗಳೆಷ್ಟೋ, ಪಕ್ಷಗಳೆಷ್ಟೋ, ಪ್ರದೇಶಗಳೆಷ್ಟೋ,.....

ನಿಹೊಂದಿರುವ ನದಿಗಳೆಷ್ಟೋ, ಬೆಟ್ಟಗಳೆಷ್ಟೋ, ಸರೋವರಗಳೆಷ್ಟೋ,......

ನೀನಾಚರಿಸುವ ಉತ್ಸವಗಳೆಷ್ಟೋ, ಜಾತ್ರೆಗಳೆಷ್ಟೋ, ಸಂಪ್ರದಾಯಗಳೆಷ್ಟೋ,....

ನಿನ್ನಭಿಮಾನದ ಕಲೆ, ಸಾಹಿತ್ಯ, ಸಂಗೀತ, ತಂತ್ರಜ್ಞಾನಗಳೆಷ್ಟೋ,

ನೀನನುಭವಿಸಿದ ದಾಳಿ, ಹಿಂಸೆ, ದೌರ್ಜನ್ಯ, ಅತ್ಯಾಚಾರಗಳೆಷ್ಟೋ,..

ನಿನ್ನೊಳಗಿನ ಅಮಾಯಕರು, ಅಸಹಾಯಕರು, ಶೋಷಿತರೆಷ್ಟೋ,.....

ನಿಜವಾದ ದೇಶದ್ರೋಹಿಗಳೆಷ್ಟೋ,

ಕಪಟ ದೇಶಭಕ್ತರೆಷ್ಟೋ,

ಕ್ರೂರಿಗಳೆಷ್ಟೋ, ವಂಚಕರೆಷ್ಟೋ,.......

ಆಗರ್ಭ ಶ್ರೀಮಂತರೆಷ್ಟೋ, ಹಸಿವಿನಿಂದ ಸತ್ತವರೆಷ್ಟೋ,

ದೇವ ಮಂದಿರಗಳ ವೈವಿದ್ಯತೆಯೆಷ್ಟೋ, ಸ್ಮಶಾನಗಳ ಭಿನ್ನತೆಯೆಷ್ಟೋ,.......

ಮಸೀದಿಗಳೆಷ್ಟೋ,

ಚರ್ಚುಗಳೆಷ್ಟೋ,

ಜೈನ ಮಂದಿರಗಳೆಷ್ಟೋ ಗುರುದ್ವಾರಗಳೆಷ್ಟೋ,

ಬೌದ್ದ ಸ್ತೂಪಗಳೆಷ್ಟೋ,....

ಪ್ರಕೃತಿಯ ವಿಕೋಪಗಳೆಷ್ಟೋ, ಮಾನವನ ಚೇಷ್ಟೆಗಳೆಷ್ಟೋ,....

ಆದರೂ,

ನಿಂತಿರುವೆ ಹೆಬ್ಬಂಡೆಯಾಗಿ, ವಜ್ರದೇಹಿಯಾಗಿ,

ಹೂ ಹೃದಯದ ಮಾತೆಯಾಗಿ, ಶುಭ್ರಮನಸ್ಸಿನ ಮಮತೆಯಾಗಿ,......

ಇಷ್ಟಾದರೂ ಇರಿಯುತ್ತಿದ್ದಾರೆ ನಿನ್ನನ್ನು ನಿನ್ನದೇ ಹಿತಶತ್ರುಗಳು,.....

ನಿನ್ನೊಂದಿಗೆ ತಾವೂ ನಾಶವಾಗುತ್ತೇವೆಂಬ ಅರಿವಿಲ್ಲದ ಮತಿಹೀನರು,.....

ಎಲ್ಲವೂ ತಿಳಿದಿರುವ ಜ್ಞಾನಿಗಳು ನಾವೆಂಬ ಅಹಂಕಾರದ ಅಜ್ಞಾನಿಗಳು,....

ಸ್ವಾತಂತ್ರ್ಯದ ಅರ್ಥಗೊತ್ತಿಲ್ಲ, ಸಮಾನತೆಯ ಮಹತ್ವ ತಿಳಿದಿಲ್ಲ,......

ತಾಳ್ಮೆ ಇಲ್ಲ, ತ್ಯಾಗವಿಲ್ಲ, ಕರುಣೆಯಿಲ್ಲ, ದುರಹಂಕಾರವೇ ಎಲ್ಲಾ.......

ಆದರೂ.......

ನಿನ್ನ ಅಸ್ತಿತ್ವ ಸಹಸ್ರಾರು ವರ್ಷಗಳ ನಿರಂತರ ಚಲನೆಯಿಂದ ಕೂಡಿದೆ......

ನನ್ನ ಭರತ ಖಂಡವೇ ಏನೆಂದು ವರ್ಣಿಸಲಿ – ಎಷ್ಟೆಂದು ವರ್ಣಿಸಲಿ ನಿನ್ನನ್ನು ......

ಪದಗಳು – ಭಾವಗಳು – ಕಲ್ಪನೆಗಳಿಗೂ ನಿಲುಕದ ನಿನ್ನನ್ನು ಹೇಗೆಂದು ಹಿಡಿದಿಡಲಿ ಈ ಪುಟ್ಟ ಹೃದಯದಲಿ....

ರಾಮಾಯಣ – ಮಹಾಭಾರತ – ಭಗವದ್ಗೀತೆಗಳೆಂಬ – ಅಸಾಮಾನ್ಯ ಬೃಹತ್ ಗ್ರಂಥಗಳು ನಿನ್ನಲ್ಲೇ ಸೃಷ್ಟಿಯಾದವು........

ಗೌತಮ ಬುದ್ಧ – ಮಹಾವೀರರೆಂಬ ಚಿಂತನ ಚಿಲುಮೆಗಳಿಗೆ ಜನ್ಮ ನೀಡಿದ್ದು ನೀನೇ.......

ಹಿಮಗಿರಿಯ ಸೌಂದರ್ಯ – ನಿತ್ಯ ಹರಿದ್ವರ್ಣದ ಕಾಡುಗಳು – ತುಂಬಿ ತುಳುಕುವ ನದಿಗಳು – ಕೌತುಕದ ಬೆಟ್ಟ ಗುಡ್ಡಗಳು – ಆಕರ್ಷಕ ಮರುಭೂಮಿ – ವಿಸ್ತಾರವಾದ ಬಯಲುಗಳು ಅಡಗಿರುವುದೂ ನಿನ್ನಲ್ಲೇ....

ಹಿಂದೂ – ಮುಸ್ಲಿಂ – ಕ್ರಿಶ್ಚಿಯನ್ – ಸಿಖ್ – ಬುದ್ಧ – ಜೈನ – ಪಾರ್ಸಿಗಳೆಲ್ಲರ ಆಶ್ರಯದಾತ ನೀನೇ.....

ಋಷಿ ಮುನಿಗಳ – ದಾಸ ಆಚಾರ್ಯರ – ಪಂಡಿತ ಪಾಮರರ ನೆಲೆವೀಡು ನಿನ್ನದೇ......

ಸಮಾನತೆಯ ಹರಿಕಾರ – ಪ್ರಜಾ ಕ್ರಾಂತಿಯ ಧೀಮಂತ ಬಸವಣ್ಣ ಜನಿಸಿದ್ದು ಈ ಮಣ್ಣಿನಲ್ಲಿಯೇ.....

ವಿಶ್ವ ದಾರ್ಶನಿಕ – ಸಾಂಸ್ಕೃತಿಕ ರಾಯಭಾರಿ ಸ್ವಾಮಿ ವಿವೇಕಾನಂದರು ಹುಟ್ಟಿದ್ದು ಈ ನೆಲದಲ್ಲೇ.....

ಹಿಂದೆಂದೂ ಹುಟ್ಟಿರದ ಮುಂದೆಂದೂ ಹುಟ್ಟಲಸಾಧ್ಯವಾದ ಅಂಬೇಡ್ಕರ್ ಎಂಬ ಜ್ಞಾನದ ಬೆಳಕಿನ ಕಿಡಿ ಬೆಳಗಿದ್ದು ನಿನ್ನ ತೋಳಿನಲ್ಲೇ....

ಮಾನವ ಜನಾಂಗದ ಕೌತುಕ ಗಾಂಧಿ ಎಂಬ ಮಹಾತ್ಮ ಬದುಕಿದ್ದುದು ನಿನ್ನ ಮಡಿಲಲ್ಲೇ....

ಹೆಣ್ಣೆಂಬುದು ದೇವತೆಯಾದದ್ದು ನಿನ್ನೀ ಮನದ ಭಾವನೆಗಳಲ್ಲೇ.....

ತಂದೆ – ತಾಯಿಗಳೇ ದೇವರಾದದ್ದು ನಿನ್ನೀ ನೆಲದ ಮಹಿಮೆಯಿಂದಲೇ....

ಸತ್ಯ – ಅಹಿಂಸೆ – ಆಧ್ಯಾತ್ಮ – ವೈಚಾರಿಕತೆ – ಸ್ವಾತಂತ್ರ್ಯ

ಬೆಳೆದದ್ದು ನಿನ್ನೀ ಗುಣದಿಂದಲೇ.....

ಪ್ರೀತಿ – ತ್ಯಾಗ – ನಿಸ್ವಾರ್ಥ – ಮಾನವೀಯತೆ ತವರೂರು ನಿನ್ನಲ್ಲೇ ಅಡಗಿದೆ......

ಬಲಪಂಥ – ಎಡಪಂಥ – ಭಕ್ತಿಪಂಥ – ಕಾಯಕಪಂಥ – ಜ್ಞಾನಪಂಥ, ಆ ವಾದ ಈ ವಾದಗಳ ಪ್ರಯೋಗ ನಡೆಯುತ್ತಿರುವುದು ನಿನ್ನ ಒಡಲಾಳದಲ್ಲೇ......

ಇಷ್ಟೊಂದು ಭಿನ್ನತೆಗಳು ಈ ಸೃಷ್ಟಿಯಲ್ಲಡಗಿರುವುದು ನಿನ್ನಲ್ಲಿ ಮಾತ್ರ........

ಶಾಂತಿ – ಸಹೋದರತೆ – ಭಾತೃತ್ವಗಳ ಈ ನಿನ್ನ ಮಡಿಲಲ್ಲಿ ಬೆಳೆಯುತ್ತಿರುವ ಅದೃಷ್ಟವಂತ ನಾನು...

ಮೇಲೆ ನೋಡಿದರೆ ಹಿಮರಾಶಿಯ ಕಾಶ್ಮೀರ,
ಕೆಳಗೆ ನೋಡಿದರೆ ನೀಲಿ ಸಾಗರದ ಕನ್ಯಾಕುಮಾರಿ,
ಪೂರ್ವಕ್ಕೆ ಸಪ್ತ ಸೋದರಿಯರ ಸುಂದರ ನಾಡು,
ಪಶ್ಚಿಮದಲ್ಲಿ ವಾಣಿಜ್ಯ ನಗರಿಯ ಬೀಡು,
ಮಧ್ಯದಲ್ಲಿ ವಿಂಧ್ಯ ಗಿರಿ,
ಅಗೋ ಅಲ್ಲಿ ನೋಡು ಹರಿಯುತ್ತಿದ್ದಾಳೆ ಗಂಗೆ,
ಇಗೋ ಇಲ್ಲಿ ನೋಡು ನಲಿಯುತ್ತಿದ್ದಾಳೆ ಕಾವೇರಿ,
ಅಲ್ಲಲ್ಲಿ ಮುದನೀಡುವ ಮನೋಹರ ನದಿ ಕಾಡುಗಳು,
ಅಲ್ಲಿಯೇ ಹುಲಿಯ ಘರ್ಜನೆ,
ನವಿಲ ನರ್ತನ, ಕುಹೂ ಕುಹೂ ಗಾನ,
ಹಾಡಲೊಂದು ಶಾಸ್ತ್ರೀಯ ಸಂಗೀತ,
ಕೇಳಲೊಂದು ಕರ್ನಾಟಕ ಸಂಗೀತ,
ಅಲ್ಲೊಂದಿಷ್ಟು ಮರುಭೂಮಿ, ಇಲ್ಲೊಂದಿಷ್ಟು ಪಶ್ಚಿಮ ಘಟ್ಟಗಳು,
ಓದಲು ರಾಮಾಯಣ, ಮಹಾಭಾರತ,
ಕಲಿಯಲು ಬೃಹತ್ ಸಂವಿಧಾನ,
ಅರಿಯಲೊಬ್ಬ ಬುದ್ದ, ಅಳವಡಿಸಿಕೊಳ್ಳಲೊಬ್ಬ ಬಸವ,
ಬುದ್ಧಿ ಹೇಳಲೊಬ್ಬ ವಿವೇಕಾನಂದ,
ತಿಳಿವಳಿಕೆ ಮೂಡಿಸಲೊಬ್ಬ ಅಂಬೇಡ್ಕರ್,
ಎಲ್ಲರೊಳಗೊಬ್ಬ ಗಾಂಧಿ,
ಗುರುಹಿರಿಯರೆಂಬ ಗೌರವ,
ಮಕ್ಕಳೇ ಮಾಣಿಕ್ಯವೆಂಬ ಸಂಸ್ಕಾರ,
ಆಡಲು ಹಾಕಿ, ನೋಡಲು ಕ್ರಿಕೆಟ್, ಕಾಯಲೊಬ್ಬ ಪ್ರಧಾನಮಂತ್ರಿ,
ಕರುಣಿಸಲೊಬ್ಬ ಮುಖ್ಯಮಂತ್ರಿ,
ಸಂಭ್ರಮಿಸಲು ಸಂಕ್ರಾಂತಿ,
ಸ್ವಾಗತಿಸಲು ಯುಗಾದಿ,
ಕುಣಿದು ಕುಪ್ಪಳಿಸಲು ಗಣೇಶ,
ಮನರಂಜಿಸಲು ದೀಪಾವಳಿ,
ವಿಜೃಂಬಿಸಲು ದಸರಾ,
ಭಾವೈಕ್ಯತೆಯ ರಂಜಾನ್,
ರಂಗುರಂಗಿನ ಕ್ರಿಸ್ ಮಸ್,
ಸತ್ಯ, ಅಹಿಂಸೆ, ಮಾನವೀಯತೆ ಎಂಬ ಸಂಪ್ರದಾಯ,
ದಯವೇ ಧರ್ಮದ ಮೂಲವಯ್ಯ ಎಂಬ ಸಂಸ್ಕೃತಿ,

ಧನ್ಯ ಈ ನೆಲವೇ ಧನ್ಯ ಧನ್ಯ,
ನನ್ನುಸಿರಾಗಿರುವ ಭಾರತ ದೇಶವೇ,
ನಿನಗೆ ನನ್ನ ಶುಭಾಶಯದ ಹಂಗೇಕೆ,
ನೀನಿರುವುದೇ ನನಗಾಗಿ,
ನನ್ನ ಜೀವವಿರುವುದೇ ನಿನಗಾಗಿ,

ಭಿನ್ನತೆಯಲ್ಲೂ ಐಕ್ಯತೆ, ಅದುವೇ,
ನಮ್ಮ ಭಾರತೀಯ ಗಣರಾಜ್ಯ.

ಈ ನನ್ನ ಜೀವ ನಿನಗಾಗಿ....ಎಂದೆಂದಿಗೂ ...
ಏರುತಿಹುದು – ಹಾರುತಿಹುದು

ನೋಡು ನಮ್ಮ ಬಾವುಟ........
ಬಡವರ ಒಡಲಾಳದಿಂದ ಹೊರಟ ಕೆಂಬಾವುಟ,
ಬ್ರಾಹ್ಮಣ ಅಗ್ರಹಾರಗಳಿಂದ ಹೊರಟ ಕೇಸರಿ ಬಾವುಟ,
ದಲಿತ ಕೇರಿಗಳಿಂದ ಹೊರಟ ನೀಲಿ ಬಾವುಟ,
ರೈತರ ಹೊಲಗದ್ದೆಗಳಿಂದ ಹೊರಟ ಹಸಿರು ಬಾವುಟ,
ಮುಸ್ಲಿಮರ ಮನೆಗಳಿಂದ ಹೊರಟ ಹಸಿರಿನದೇ ಬಾವುಟ,
ಎಲ್ಲಾ ಶೋಷಿತರ ಕನಸಿನಾಳದಿಂದ ಹೊರಟ ಕಪ್ಪು ಬಾವುಟ,
ಶಾಂತಿಪ್ರಿಯರ ಮನಸ್ಸಿನಾಳದಿಂದ ಹೊರಟ ಹಾಲು ಬಿಳುಪಿನ ಬಾವುಟ,
ಕ್ರಿಶ್ಚಿಯನ್ನರ ಹೃದಯದಾಳದಿಂದ ಹೊರಟ ಬಿಳಿಯದೇ ಬಾವುಟ,
ಪ್ರಕೃತಿಯ ಮಡಿಲಿನಿಂದ ಹೊರಟ ಭೂ ಬಣ್ಣದ ಬಾವುಟ,
ಎಲ್ಲವೂ ಆಕಾಶದಲ್ಲಿ ಕಾಮನಬಿಲ್ಲಿನಂತೆ ಮೂಡಿ,
ಅಲೆ ಅಲೆಯಾಗಿ ತೇಲುತ್ತಾ ತೇಲುತ್ತಾ ತೇಲುತ್ತಾ,
ಭಾರತ ಮಾತೆಯ ಮೈ ಹೊದಿಕೆಯಂತೆ ಅವರಿಸಿಕೊಂಡಾಗ, ಏನೆಂದು ವರ್ಣಿಸಲಿ ಆ ಸೌಂದರ್ಯವನ್ನು,
ವಿಶ್ವ ಸುಂದರಿಯರ ಸುಂದರಿಯಂತೆ,
ಮೊನಲಿಸಾಳ ನಗುವೂ ಮಾಸುವಂತೆ,
ಸೃಷ್ಟಿಯನ್ನೇ ಮೆಟ್ಟಿನಿಂತ ದೈತ್ಯಳಂತೆ,
ಸ್ವಾತಂತ್ರ್ಯ ದೇವರುಗಳ ದೇವತೆಯಂತೆ,
ಸಮಾನತೆಯ ಸಾರುವ ಬೆಳಕಿನಂತೆ,
ಮಾನವೀಯತೆಯೇ ಪ್ರತ್ಯಕ್ಷಳಾದಂತೆ,



ಕಂಗೊಳಿಸುತ್ತದೆ......

ಇದು ಕಲ್ಪನೆಯೂ ಅಲ್ಲ,

ಅಸಾಧ್ಯವೂ ಅಲ್ಲ.

ನಮ್ಮ ನಿಮ್ಮ ಮನಗಳಲ್ಲಿ, ಪ್ರಬುದ್ಧತೆಯ ಬೀಜಾಂಕುರವಾದಾಗ,

ಯೋಚನಾಶಕ್ತಿ ವಿಶಾಲವಾದಾಗ

ಆಗ ಇದು ಸಾಧ್ಯವಾಗುತ್ತದೆ.

ನಾವು ಉಸಿರಾಡುತ್ತಿರುವಾಗಲೇ ಇದನ್ನು ನಿರೀಕ್ಷಿಸೋಣ, ...

ಇಲ್ಲದಿದ್ದರೆ ನಾವು ಪ್ರತಿನಿತ್ಯ ಹೆಣ ಉರುಳುವ,

ಆ ಹೆಣದ ರಕ್ತ ಮಾಂಸಗಳಿಗೆ ಹಾತೊರೆಯುವ ರಕ್ಕಸ ಸಂತತಿಯ ಹದ್ದುಗಳ ನಡುವೆ ಬದುಕುತ್ತಾ,

ನಾವೇ ಸರಿ ನಾವೇ ಶ್ರೇಷ್ಠ ನಮ್ಮ ಚಿಂತನೆಯೇ ಅತ್ಯುತ್ತಮ ಎಂಬ ಹುಚ್ಚಿಗೆ ಬಲಿಯಾಗಿ,

ಇಡೀ ಸಮಾಜ ಹುಚ್ಚರ ಸಂತೆಯಾಗುವುದರಲ್ಲಿ ಸಂದೇಹವಿಲ್ಲ.

ಈಗಲಾದರೂ ಎಚ್ಚೆತ್ತುಕೊಳ್ಳೋಣ......

ಇಡೀ ಭಾರತೀಯ ಸಮೂಹಕ್ಕೆ,

ಗಣರಾಜ್ಯೋತ್ಸವದ ಶುಭಾಶಯಗಳೊಂದಿಗೆ.....

ಭವ್ಯ ಭವಿಷ್ಯದ ಕನಸುಗಳನ್ನು ಕಾಣುತ್ತಾ....ನಿಮ್ಮೊಂದಿಗೆ......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,

ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ,

ಮನಗಳಲ್ಲಿ – ಮನೆಗಳಲ್ಲಿ – ಮತಗಳಲ್ಲಿ – ಪರಿವರ್ತನೆಗಾಗಿ,

ಮನಸ್ಸುಗಳ ಅಂತರಂಗದ ಚಳವಳಿ,

■

ಗಂಧ (Sandal) ಹರಡುವವನ ಕೊಂದ ದಿನ...

ಗಾಂಧಿ ಎನ್ನುವುದು ಜಾತಿ ಸೂಚಕ ಅಲ್ಲದಿರಬಹುದು. ಆದರೆ ವರ್ಗ ಸೂಚಕ ಇರಬಹುದು ಎನ್ನುವುದು ನನ್ನ ಅಭಿಪ್ರಾಯ.

ಗುಜರಾತ್, ರಾಜಸ್ಥಾನದಲ್ಲಿ ಇರುವ ವ್ಯಾಪಾರಿ ವರ್ಗದ ಪೈಕಿ ಸುಗಂಧ ವ್ಯಾಪಾರಿ ಉಪವರ್ಗ ಇದೆ. ವೈಷ್ಣವ ಜನ ಹಚ್ಚುವ ಗಂಧ (Sandal) ಮಾರುವವರು ಕೂಡ ಇದ್ದಾರೆ. ಗಂಧ (Sandal) ಮಾರುವವರು ಗಂಧಿ ಆಗುತ್ತಾರೆ. ಗಂಧಿಗಳು ಬನಿಯಾ ಸಮುದಾಯಕ್ಕೆ ಸೇರುತ್ತಾರೆ.

ಗಂಧ ಹರಡುವ ಸುವಾಸನೆ ಮನಸಿಗೆ ಆ ಕ್ಷಣದ ಉಲ್ಲಾಸ ನೀಡುವಂಥದು. ದುರ್ಗಂಧ ದೂರಾಗಿಸಲು ಸುಗಂಧ ಬೇಕು. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಜಾತಿ ತಾರತಮ್ಯ ಭಾವನೆಯ ದುರ್ಗಂಧ ಎಲ್ಲೆಡೆ ಪಸರಿಸಿತ್ತು. ಆ ಸಂದರ್ಭದಲ್ಲಿ ಮನುಷ್ಯ ಪ್ರೇಮದ ಸುಗಂಧ ಹರಡುವ ಕೆಲಸ ತುರ್ತಾಗಿ ಬೇಕಿತ್ತು. ಆ ಕ್ಷಣದ ತುರ್ತು ನಿಭಾಯಿಸಿದ ಗಂಧಿ ಕಾಲದ ಅಗತ್ಯವಾಗಿ ಕಾಣಿಸಿದರು. ಜಾತಿ ಮರೆವ ಜನರ ಸಂಭಾಳಿಸಿ ಕೀಳರಿಮೆ ತೊಲಗಿಸುವ ಪ್ರಯತ್ನ ಭಜನೆಯಿಂದ ಸಾಧ್ಯ ಎಂದುಕೊಂಡರು. ಹರಿ ಸ್ಮರಣೆ ಒಂದು ಮಾರ್ಗ ಎಂದು ಭಾವಿಸಿದರು. ದಲಿತ, ಅಸ್ಪೃಶ್ಯರನ್ನು ಹರಿಯ ಜನರಾಗಿಸಿದರು. ಆದರೂ ಆ ಹರಿ ಈ ಜನರ ಬವಣೆ ಬಗೆ'ಹರಿ'ಸಲಿಲ್ಲ.

ಅದಕ್ಕೆ ಅಂಬೇಡ್ಕರ್ ಬೇಕಾಯಿತು. ಕಾಲದ ಗಾಯ ಮಾಯಿಸುವ ಔಷಧಿ ಬರಿ ಹರಿ ಸ್ಮರಣೆಯಲ್ಲಿ ಇಲ್ಲ. ಕಂಡುಕೊಳ್ಳುವುದು ಮುಖ್ಯ ಎಂದರು.


ಒಂದು ಗಾಯ ಮರೆಸುವ ಕೆಲಸವಾದರೆ ಮತ್ತೊಂದು ಗಾಯ ಮಾಯಿಸುವ ಕೆಲಸ. ಎರಡರ ಅಗತ್ಯ ಇದ್ದೇ ಇತ್ತು. ಗಂಧಿ ಗಾಯಗೊಳಿಸುವವರಿಗೆ ಮನಸು ತೊಳೆದುಕೊಳ್ಳುವ ಬಗೆ ಹೇಳಿದರು. ಆದರೆ ಅವರು ಭಜನೆ ಮಾತ್ರ ಉಳಿಸಿಕೊಂಡರು. ಗಾಯಗೊಂಡವರಿಗೆ ಗಾಯ ಮಾಯಿಸುವ ಉಪಾಯ ಹೇಳಿಕೊಟ್ಟವರು ಬಾಬಾಸಾಹೇಬ. ಆದರೆ ಗಾಯ ಕೆರೆದುಕೊಂಡರೆ ವಿನಃ ಉಪಾಯದ ಬಗ್ಗೆ ಚಿಂತಿಸುತ್ತಲೇ ಇಲ್ಲ. ಹೀಗಾಗಿ ಈ ಇಬ್ಬರನ್ನು ಅವರದೇ ಜನ ಫೋಟೋ ಫ್ರೇಮ್ ನಲ್ಲಿ ಬಂಧಿಯಾಗಿಸಿದರು.

ಈ ಕಾಲದ ಅತ್ಯಂತ ದೊಡ್ಡ ಸತ್ಯ ಎಂದರೆ ಈ ಎರಡು ಕಣ್ಣುಗಳು ಆರೋಗ್ಯಕರ ಇಂಡಿಯಾದ ಆಸ್ತಿ. ಜಗತ್ತನ್ನು ನೋಡಲು ಈ ಕಂಗಳು ಉಳಿಸಿಕೊಳ್ಳಬೇಕು.

ಗಂಧಿ ಈ ಗಾಂಧಿ. ಇವತ್ತು ಅವರ ದೇಹಕ್ಕೆ ಗುಂಡಿಟ್ಟು ಹತ್ಯೆ ಮಾಡಿದ ದಿನ. ಗಾಂಧಿ ಬದುಕುಳಿದು ಈಗಲೂ ಸದಾ ಜೀವಂತ ಅಂಬೇಡ್ಕರ್ ಜೊತೆ ಸಂವಾದ ನಡೆಸುತ್ತಲೇ ಇರುತ್ತಾರೆ. ಗಾಂಧೀಜಿಗೆ ನಮಸ್ಕಾರ .

– ದಿಲಾವರ್ ರಾಮದುರ್ಗ

(ಗಾಂಧಿ : ಮೌಲ್ಯಗಳ ನಡುವಿನ ಮೌನ ಪುಸ್ತಕದ ಒಂದು ಲೇಖನ)



ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಹೀಗಿದ್ರು ನಮ್ಮ ನಾಯಕರು..

ಅದು 1938ರ ಸಮಯ. ಕಲ್ಕತ್ತಾದಲ್ಲಿ ಬ್ರಿಟಿಷ್ ಸರ್ಕಾರದ ಅಧಿಕಾರಿಗಳ ಜೊತೆ ಗಾಂಧೀಯವರು ಸ್ವಾಂತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಹೋರಾಟಗಾರರನ್ನು ಜೈಲಿನಿಂದ ಬಿಡುಗಡೆಗೊಳಿಸುವ ಕುರಿತಾಗಿ ಸಂಧಾನದ ಮಾತುಕತೆಯಲ್ಲಿ ತೊಡಗಿದ್ದರು. ಆ ಸಮಯದಲ್ಲಿ ಎಪ್ಪತ್ತು ವರ್ಷದ ಗಾಂಧೀಯವರ ರಕ್ತದೊತ್ತಡ ಹೆಚ್ಚಾಯಿತು. ಚಿಕಿತ್ಸೆಗಾಗಿ ದಕ್ಷಿಣ ಕಲ್ಕತ್ತಾದ ಎಲ್ಗಿನ್ ರಸ್ತೆಯಲ್ಲಿದ್ದ ಸುಭಾಸಚಂದ್ರ ಬೋಸರ ಮನೆಯಲ್ಲಿ ಅವರು ತಂಗಿದರು.

ಪ್ರಖ್ಯಾತ ವೈದ್ಯರಾದ ನೀಲ್ರತನ್ ಸರ್ಕಾರ್ ಮತ್ತು ಬಿಧಾನ್ ರಾಯ್ ಗಾಂಧೀಯವರಿಗೆ ಚಿಕಿತ್ಸೆ ನೀಡಿದರು. ಎಲ್ಲ ನಾಯಕರಲ್ಲಿ ಆತಂಕ ಮನೆಮಾಡಿತ್ತು.

ಮಹಾತ್ಮನ ಅನಾರೋಗ್ಯದಿಂದ ಚಿಂತಾಕ್ರಾಂತರಾದ ಗುರುದೇವ ರವೀಂದ್ರನಾಥ ಟ್ಯಾಗೋರ್ ಅವರು ಗಾಂಧೀಯವರನ್ನು ನೋಡಲು ಬೋಸ್ ಅವರ ಮನೆಗೆ ಬಂದರು. ಆದರೆ ಗಾಂಧೀಯವರು ಮೂರನೇ ಮಹಡಿಯಲ್ಲಿದ್ದರು. ಎಪ್ಪತ್ತೆಂಟು ವರ್ಷದ ಟ್ಯಾಗೋರ್ ಅವರು ಮೇಲೆ ಹತ್ತಲು ಆಗಲಿಲ್ಲ. ಆದ್ದರಿಂದ ಅವರಿಗಾಗಿ ಒಂದು ಖುರ್ಚಿಯನ್ನು ತರಿಸಿ ಅವರನ್ನು ಅದರಲ್ಲಿ ಕೂರಿಸಿ ನಾಲ್ಕು ಜನ ಎತ್ತುಕೊಂಡು ಮೇಲೆ ಹೋದರು. ಗುರುದೇವರು ಕುಳಿತ ಕುರ್ಚಿ ಎತ್ತಿಕೊಂಡು ಮಹಾತ್ಮನಲ್ಲಿಗೆ ಓಯ್ದವರು ಯಾರು ಗೊತ್ತೇ?

ಸುಭಾಸಚಂದ್ರ ಬೋಸ್, ಜವಾಹರ್‌ಲಾಲ್ ನೆಹರೂ, ಶರತ್‌ಚಂದ್ರ ಬೋಸ್ ಮತ್ತು ಮಹಾದೇವ್ ದೇಸಾಯಿ

ಮಹಾತ್ಮ ಗಾಂಧೀಜಿಯವರ ಕುರಿತು ನೇತಾಜಿ ಅವರ ಅಭಿಪ್ರಾಯ*

ಗಾಂಧಿ ಸ್ವಾತಂತ್ರ್ಯ ಹೋರಾಟದ ಸರ್ವೋಚ್ಚ ನಾಯಕ ಎಂದು ಬೋಸ್ ಭಾವಿಸಿದ್ದರು. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಕ್ಕೆ ಮೊದಲಿನ ಪತ್ರ ವ್ಯವಹಾರದಲ್ಲಿಯೂ ಬೋಸ್ ಇದನ್ನು ಸ್ಪಷ್ಟಪಡಿಸಿದ್ದಾರೆ– 'ನಿಮ್ಮ ಬಗ್ಗೆ ನನಗಿರುವ ಗೌರವವನ್ನು ಕಡಿಮೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಪತ್ರವೊಂದರಲ್ಲಿ ಗಾಂಧಿಗೆ ಬೋಸ್ ಹೇಳಿದ್ದರು. 'ಇತರರ ವಿಶ್ವಾಸ ಗೆಲ್ಲಲು ಸಾಧ್ಯವಾದರೂ ಭಾರತದ ಅತ್ಯಂತ ಶ್ರೇಷ್ಠ ವ್ಯಕ್ತಿಯ ವಿಶ್ವಾಸ ಸಿಗದಿರುವುದು ನನ್ನ ಮಟ್ಟಿಗೆ ದೊಡ್ಡ ದುರಂತ' ಎಂದೂ ಬೋಸ್ ಬರೆದಿದ್ದರು.

ಅವರಿಗೆ ಅತಿ ಹೆಚ್ಚು ಗೌರವ ಇದ್ದದ್ದು ಮಹಾತ್ಮ ಗಾಂಧಿಯ ಬಗ್ಗೆಯೇ ಆಗಿತ್ತು. 1943ರ ಅಕ್ಟೋಬರ್ 2ರಂದು ಬ್ಯಾಂಕಾಕ್‌ನಿಂದ ರೇಡಿಯೊದಲ್ಲಿ ಮಾತನಾಡಿದ್ದ ಬೋಸ್, 'ಶ್ರೇಷ್ಠ ನಾಯಕ ಮಹಾತ್ಮ ಗಾಂಧಿಯ 75ನೇ ಹುಟ್ಟುಹಬ್ಬ ಇಂದು ' ಎಂಬುದನ್ನು ಭಾರತೀಯ ಕೇಳುಗರಿಗೆ ನೆನಪಿಸಿದ್ದರು. ಗಾಂಧಿಯ ಕೊಡುಗೆಗಳನ್ನು ವಿವರಿಸಿದ್ದರು.

1920ರಲ್ಲಿ ಅಸಹಕಾರ ಚಳವಳಿಯನ್ನು ಅವರು ಹೇಗೆ ಆರಂಭಿಸಿದ್ದರು ಎಂಬುದನ್ನು ಹೇಳಿದರು. ' ಸ್ವಾತಂತ್ರ್ಯದ ಮಾರ್ಗವನ್ನು ತೋರುವುದಕ್ಕಾಗಿ ದೇವರೇ ಈ ವ್ಯಕ್ತಿಯನ್ನು ಕಳುಹಿಸಿದಂತೆ ತೋರುತ್ತದೆ. ಸ್ವಯಂಪ್ರೇರಣೆಯಿಂದ ಇಡೀ ದೇಶ ಅವರ ಹಿಂದೆ ನಿಂತಿತು ' ಎಂದು ಬೋಸ್ ಹೇಳಿದರು.

" ಗಾಂಧಿ ರಾಷ್ಟ್ರ ನಾಯಕರಾಗಿ ಬೆಳೆದ ನಂತರದ 20 ವರ್ಷಗಳ ಅವಧಿಯಲ್ಲಿ ಭಾರತೀಯರು ' ರಾಷ್ಟ್ರೀಯ ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು' ಕಲಿತರು. ಈಗ ಅವರಿಗೆ ಇಡೀ ದೇಶವನ್ನು ಪ್ರತಿನಿಧಿಸುವ ರಾಷ್ಟ್ರವ್ಯಾಪಿ ಸಂಘಟನೆಯೂ ಇದೆ. ಭಾರತಕ್ಕೆ ಮತ್ತು ಭಾರತದ ಸ್ವಾತಂತ್ರ್ಯಕ್ಕೆ ಗಾಂಧಿ ನೀಡಿದ ಕೊಡುಗೆ ವಿಶಿಷ್ಟ ಮತ್ತು ಪರ್ಯಾಯವಿಲ್ಲದ್ದಾಗಿದೆ. ನಮ್ಮ ರಾಷ್ಟ್ರೀಯ ಇತಿಹಾಸದಲ್ಲಿ ಎಲ್ಲ ಕಾಲದಲ್ಲಿಯೂ ಅವರ ಹೆಸರನ್ನು ಸ್ವರ್ಣಾಕ್ಷರದಲ್ಲಿಯೇ ಬರೆದಿಡಲಾಗುತ್ತದೆ' ಎಂಬುದು ಬೋಸ್ ಅವರ ಮಾತಾಗಿತ್ತು. ಬೋಸ್ ಅವರ ಈ ರೇಡಿಯೋ ಭಾಷಣದ ಸಂದರ್ಭದಲ್ಲಿ ಗಾಂಧೀಜಿ ಪುಣೆಯ ಜೈಲಿನಲ್ಲಿದ್ದರು.

(ಸಂಗ್ರಹ : ರವಿಚಂದ್ರ ಜಂಗಣ್ಣವರ)

■

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ 75ನೇ ವರ್ಷಾಚರಣೆ ಮತ್ತು ಸರ್ವೋದಯ ದಿನಾಚರಣೆಯ ದೃಶ್ಯಾವಳಿಗಳು



ಸರ್ವೋದಯ ದಿನಾಚರಣೆಗೆ ಸಜ್ಜಾಗಿರುವ ಮಹಾದೇವ ದೇಸಾಯಿ ಸಭಾಂಗಣ ..



ಗಾಂಧಿ ಜೀವನ ಸಾಧನೆಯ ನೂರು ಛಾಯಾ ಚಿತ್ರಗಳ ಪ್ರದರ್ಶನ ಉದ್ಘಾಟನೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವ ಎಚ್ ಕೆ ಪಾಟೀಲ್ ಅವರಿಂದ



ವಿದ್ಯಾರ್ಥಿಗಳಿಂದ ಗಾಂಧಿ ಛಾಯಾ ಚಿತ್ರ ಪ್ರದರ್ಶನ ವೀಕ್ಷಣೆ ..




ಅತಿಥಿಗಳೊಡನೆ ಗಾಂಧಿ ಸ್ಮಾರಕ ನಿಧಿ ಮತ್ತು ಭಾರತೀಯ ವಿದ್ಯಾಭವನದ ಪದಾಧಿಕಾರಿಗಳು ..



ಕರ್ನಾಟಕ ಗಾಂಧಿ ಸ್ಮಾರಕ ನಿಧಿ –75 ಲೋಗೋ ಬಿಡುಗಡೆ



ಸಚಿವ ಎಚ್ ಕೆ ಪಾಟೀಲರಿಂದ ಉದ್ಘಾಟನಾ ಭಾಷಣ ..



ಸಮಾರಂಭದಲ್ಲಿ ಬಿಡುಗಡೆಯಾದ ಪುಸ್ತಕಗಳು ..




ಕರ್ನಾಟಕ ಗಾಂಧಿ ಸ್ಮಾರಕ ನಿಧಿ –75 ಲೋಗೋ & 75 ಸ್ಮರಣಿಕೆ



ಪ್ರೊ. ಮೀನಾ ದೇಶ ಪಾಂಡೆ ಅವರಿಂದ ಬೆಳಗುಂಬ ನಾರಾಯಣಪ್ಪ, ನಮ್ಮಾಳ್ವಾರ್ ಎಂ ಎಚ್ ಕೌಜಲಗಿ ಮತ್ತು ನರಸಿಂಹ ದಾಬಡೆ ಅವರುಗಳ ಹೆಸರಿನಲ್ಲಿ 'ಗಾಂಧಿ ಮತ್ತು ಸರ್ವೋದಯ' ದತ್ತಿ ಉಪನ್ಯಾಸ .



ಸರ್ವೋದಯ ಪ್ರಮಾಣ ವಚನ ಸ್ವೀಕಾರ



ಪ್ರಿಯ ಬಾಪು

ನಿನ್ನನ್ನು ಯಾರೂ ಕೊಲ್ಲಲಾಗುವುದಿಲ್ಲ; ಜನರ ಉಸಿರಲ್ಲಿ ಬೆರೆತು ಪ್ರತಿಕ್ಷಣವೂ ಜೀವಂತವಿರುವ ನೀನು ಈ ದೇಶದ ಆತ್ಮವಾಗಿದ್ದಿಯ. ನುಡಿದಂತೆ ನಡೆದ ಮಾರ್ಗದಲ್ಲಿ ನೀನೇ ನೇಯ್ದುಕೊಂಡ ತುಂಡೆರಡು ಬಟ್ಟೆಯನುಟ್ಟು, ಕೋಲ ಹಿಡಿದು ದೇಶವನ್ನು ಸುತ್ತಿ ಜಡತ್ವವನ್ನು ಜಾಡಿಸಿದ ಜಂಗಮನು ನೀನು. ಇಂದಿನವರೆಗೆ ನಿನ್ನಂತಹ ಮತ್ತೊಬ್ಬನನ್ನು ಕಾಣಲಿಲ್ಲ ಈ ಪ್ರಪಂಚ. ತಾಯಂದಿರು ಕೂಸುಗಳನ್ನು ಹೊತ್ತು, ರೈತರು ಉಳುಮೆ ಬಿಟ್ಟು, ವ್ಯಾಪಾರಸ್ಥರು ಅಂಗಡಿ ಮುಚ್ಚಿ ನಿನ್ನನ್ನು ಕಾಣಲು ಓಡೋಡಿ ಬಂದ ಕಥೆಗಳನ್ನು ಕೇಳಿ ಬೆಳೆದವರು ನಾವು. ಈ ದೇಶವಷ್ಟೇ ಅಲ್ಲ, ಪ್ರಪಂಚವೇ ನಿನ್ನ ಅಹಿಂಸೆ ಮತ್ತು ಸತ್ಯಾಗ್ರಹ ತತ್ವಗಳಿಗೆ ಮಾರು ಹೋಗಿದೆ. ಅಹಿಂಸೆಯೆಂಬ ಬೆಳಕು ಮೊದಲಿನಿಂದ ಇತ್ತಾದರೂ ನೀನದನ್ನು ಬೆಳಗಿ ತೋರಿಸಿದೆ. ಕೇವಲ ಮಾರ್ಟಿನ್ ಲೂಥರ್ ಕಿಂಗ್ (ಜು), ನೆಲ್ಸನ್ ಮಂಡೇಲಾ, ಆಂಗ್ ಸಾನ್ ಸೂಕಿ, ಚಾರ್ಲ್ಸ್ ವಾಕರ್, ಪ್ರೊ. ಅಡಾಲ್ಫೊ ಡಿ ಒಬಿಯೆಟಾ, ಡೆಸ್ಮಂಡ್ ಟುಟು ಅಥವಾ ಬರಾಕ್ ಒಬಾಮರಂತಹ ಗಣ್ಯರನ್ನೂ ಪ್ರಭಾವಿಸಿದ್ದಲ್ಲ, ಪ್ರಪಂಚದ ಎಷ್ಟೋ ಸಾಮಾನ್ಯರನ್ನೂ ನೀನು ತಾಕಿದ್ದಿಯಾ ಎನ್ನುವುದೇ ಸೋಜಿಗ. ಇಥಿಯೋಪಿಯಾದ ಪ್ರವಾಸದಲ್ಲಿದ್ದಾಗ, ನನ್ನ ಸ್ನೇಹಿತೆ ಗಾಂಧಿಯವರ ಆತ್ಮ ಕಥೆಯನ್ನು ಓದುತ್ತಿದ್ದು, ಹೊರಗೆ ಹೋಗುವಾಗ ಪುಸ್ತಕವನ್ನು ವಾಹನದಲ್ಲಿಯೇ ಬಿಟ್ಟು ಬಂದಿದ್ದರು. ಮರಳಿ ಬಂದಾಗ ಸ್ವಲ್ಪಮಟ್ಟಿಗೆ ಇಂಗ್ಲಿಷ್ ಮಾತನಾಡುತ್ತಿದ್ದ ನಮ್ಮ ವಾಹನ ಚಾಲಕರು ಆ ಪುಸ್ತಕವನ್ನು ತಿರುವಿ ಹಾಕುತ್ತಿದ್ದರು. ನನಗೆ ಗಾಂಧಿ ಎಂದರೆ ತುಂಬಾ ಇಷ್ಟ, ಅವರ ಅಹಿಂಸಾ ತತ್ವವು ಇಂದಿಗೂ ಈ ಜಗಳಗಂಟ ಪ್ರಪಂಚಕ್ಕೆ ಬಹು ಅಗತ್ಯವಿದೆ ಎಂದಾಗ ಆಶ್ಚರ್ಯವೆನಿಸಿತು. ಆ ಪುಸ್ತಕವನ್ನು ನನ್ನ ಮಗಳಿಗಾಗಿ ಓದಲು ಕೊಟ್ಟರೆ ಮತ್ತೆ ಮರಳಿಸುತ್ತೇನೆ ಎಂದಾಗ, ನನ್ನ ಸ್ನೇಹಿತೆ ಪುಸ್ತಕವನ್ನು ಅವರಿಗೆ ಕೊಡುಗೆಯಾಗಿ ಕೊಟ್ಟ ನೆನಪಿನ್ನೂ ಹಸಿರಾಗಿದೆ. ಜಾಗತಿಕವಾಗಿ ಒಪ್ಪಿತವಾದ ಸತ್ಯ ಮತ್ತು ಅಹಿಂಸಾ ಮಾರ್ಗಗಳ ಮಹತ್ವದ ನೆನಪಿಗಾಗಿ ಈ ದೇಶಕ್ಕೆ ಬರುವ ವಿದೇಶಿಗರು ನಿನ್ನ ವಿಶ್ರಾಂತಿ ತಾಣಕ್ಕೆ ಇಂದಿಗೂ ಬರುತ್ತಾರೆ.

ಆದರೆ, ಈ ದೇಶದಲ್ಲಿನ್ನೂ 'ಪಿತಾಮಹಾ' ಅಥವಾ 'ಮಹಾತ್ಮ'ನೆಂಬ ಬಿರುದುಗಳಿಗೆ ನೀನು ಅರ್ಹನೇ ಎಂಬ ಚರ್ಚೆಗಳು ನಡೆಯುತ್ತಿವೆ. ನೀನು ಅದನ್ನು ಕೇಳದೆಯೂ, ಅವು ನಿನಗೆ ತಕ್ಕುದಾದವು ಎಂದುಕೊಂಡ ಮತ್ತಾರೋ ಮಹನೀಯರು ಕೊಟ್ಟ ಆ ಬಿರುದುಗಳನ್ನು ಜನ ಅಂದಿಗೂ ಇಂದಿಗೂ ಒಪ್ಪಿದ್ದಾರೆ ಅಷ್ಟೆ. ಅದನ್ನೀಗ ಮತ್ತಾರೋ ಬೇಡವೆಂದು ಕಿತ್ತುಕೊಂಡರೆ ನೀನೇನು ತಲೆಕೆಡಿಸಿಕೊಳ್ಳುವುದಿಲ್ಲ ಬಿಡು.

ನಿನ್ನ ಮಹತ್ಸಾಧನೆಯಾದರೂ ಏನು? ಕೇವಲ ಅಹಿಂಸೆಯಿಂದಲೇ ನಮಗೆ ಸ್ವಾತಂತ್ರ್ಯ ಬಂದಿತೇ? ಎಷ್ಟೊಂದು ಸಾವು ನೋವುಗಳಾದವಲ್ಲ! ಅಹಿಂಸೆಯು ಹೇಡಿತನದ ಗುರುತಲ್ಲವೇ? ಇಂತಹ ಪ್ರಶ್ನೆಗಳಿಗೆ ನೀನು ಉತ್ತರದಾಯಿಯಲ್ಲ, ಜನರೇ ಉತ್ತರಿಸುತ್ತಾರೆ; ಹೌದು ಬಲಿದಾನ ನೀಡಿದ ಸಾವಿರಾರು ಪುಣ್ಯ ಜೀವಿಗಳು ಸ್ಮರಣೀಯರೇ. ಕೇವಲ ಅಹಿಂಸಾ ಮಾರ್ಗವೇ ಎಲ್ಲವೂ ಆಗಿರಲಿಲ್ಲವಾದರೂ, ಅಂದಿನ ತನಕ ಯುದ್ಧವೇ ಅಂತಿಮ ಮಾರ್ಗವೆಂದುಕೊಂಡಿದ್ದ ಪ್ರಪಂಚದ ಮೂಲ ನಂಬಿಕೆಯ ಬುಡವನ್ನೇ ಅಲ್ಲಾಡಿಸಿತಲ್ಲವೇ ನಿನ್ನ ಅಹಿಂಸಾವಾದ. ಕಡು ಬಡತನ, ದಾರಿದ್ರ್ಯ ಮತ್ತು ಶೋಷಣೆಯಲ್ಲಿ ಮುಳುಗಿದ್ದ ಅಂದಿನ ಸಮಾಜವನ್ನು ಯುದ್ಧದಲ್ಲಿ ಮುಳುಗಿಸಿ ಮತ್ತಷ್ಟು ಕೂಪಕ್ಕೆ ತಳ್ಳಬೇಕಿತ್ತೇ? ನಮ್ಮೊಳಗಿನ ಗುಲಾಮಿತನವನ್ನು ಯಾವ ಹಿಂಸೆ ಅಥವಾ ಯಾವ ವೀರತನದಿಂದ ಹೊಡೆದೊಡಿಸುವುದು? ಕಾದಾಡಿ ಗೆಲ್ಲುವವರು ನಮಗೆ ಸ್ವತಂತ್ರತೆಯ ಬದಲಾವಣೆ ತರುತ್ತಿದ್ದರೋ ಅಥವಾ ಸ್ವಾಮಿತನದ ಬದಲಾವಣೆ ಪ್ರಸಾದಿಸುತ್ತಿದ್ದರೋ ಯಾರಿಗೆ ಗೊತ್ತು? ಯುದ್ಧಗಳಲ್ಲಿ ಕೊಂದವರಿಗಿಂತ ಅಥವಾ ಸತ್ತವರಿಗಿಂತ, ಇದ್ದೂ ಸತ್ತವರು ಅವರ ಮಹಿಳೆಯರು ಮತ್ತು ಮಕ್ಕಳು. ಪುರುಷ ಪ್ರಧಾನ ಹಿಂಸಾ ಮಾರ್ಗದಿಂದ ನೊಂದು ಬೆಂದಿದ್ದ ಮಹಿಳೆ ಮತ್ತು ಮಕ್ಕಳು ಈ ಅಹಿಂಸಾ ತತ್ವದಿಂದ ನಿರಂಬಳವಾಗಿದ್ದು ನಿಜವಲ್ಲವೇ? ಹಿಂಸೆಯಿಂದ ವಿಜಯಿಯಾದವರು ಮತ್ತೆ ಹಿಂಸೆಯನ್ನೇ ಹುಟ್ಟುಹಾಕಿದ್ದಲ್ಲದೆ, ಅದರಲ್ಲೇ ತಮ್ಮನ್ನು ಮತ್ತು ತಮ್ಮ ಜನರನ್ನು ಕಿಚ್ಚಿಗಿಳಿಸಿದ ಉದಾಹರಣೆಗಳು ಅವೆಷ್ಟೋ! ನಿನ್ನ ಸತ್ಯ ಮತ್ತು ಅಹಿಂಸಾ ತತ್ವಗಳು ಅಂದಿನ ರಾಜ

ಮಹಾರಾಜರನ್ನು ಪ್ರಭಾವಿಸಿದ ಕಾರಣದಿಂದಲೇ ಪ್ರಭುಗಳ ಆಳ್ವಿಕೆಯಡಿ ಛಿದ್ರಗೊಂಡಿದ್ದ ಪ್ರದೇಶವನ್ನು ಒಗ್ಗೂಡಿಸಿ ಒಂದು ದೇಶವಾಗಿ ಕಟ್ಟಲು ಸಾಧ್ಯವಾಯಿತು. ಹಾಗಾಗಿಯೇ, ಪ್ರತಿ ಜನಸಾಮಾನ್ಯರೂ ತಮ್ಮ ಸರ್ಕಾರವನ್ನು ಚುನಾಯಿಸುವಂತಾಗಿ ಸ್ವತಂತ್ರ ಭಾರತದ ಜನರು ಪ್ರಜಾಪ್ರಭುತ್ವದ ಫಲವನ್ನು ಕುಯಿಲು ಮಾಡಿಕೊಳ್ಳುತ್ತಿದ್ದಾರೆ. ಎಲ್ಲವೂ ಸರಿಹೋಗಿದೆ ಎಂದಲ್ಲ, ಆದರೆ ಪ್ರಭುತ್ವದ ಆಡಳಿತಕ್ಕಿಂತ ಉತ್ತಮವಾಗಿ ಜನರು ತಮ್ಮ ಬದುಕನ್ನು ಕಟ್ಟಿಕೊಳ್ಳುವ ಅವಕಾಶ ಹೊಂದಿದ್ದಾರೆ ಎಂಬುದು ನಿನಗೂ ಒಪ್ಪಿತವೆ.

ದ್ವಿ–ರಾಷ್ಟ್ರ ತತ್ವದ (ಟೂ ನೇಷನ್ಸ್ ಥಿಯರಿ) ಕಿಡಿ ಹೊತ್ತಿಸಿ, ದೇಶ ವಿಭಜನೆಯಾಗಿ, ಹಿಂಸೆಯ ಉರಿ ಹತ್ತಿಕೊಂಡಾಗ, ಕಿಡಿ ಹತ್ತಿಸಿದವರು ದೂರಿದ್ದು ನಿನ್ನನ್ನು. ವಿಭಜಿತಗೊಂಡ ಇನ್ನೊಂದು ದೇಶದ ಪಾಲಿನ 45 ಕೋಟಿಯನ್ನು ಕೊಡುವಂತೆ ನೀನು ಹಠ ಮಾಡಿದ್ದು ಗುಂಡಿಕ್ಕುವಂತಹ ತಪ್ಪೇ?

ಕೋಮು ಗಲಭೆಗಳನ್ನು ಹುಟ್ಟುಹಾಕುವ ಆಟಗಳು ನೀನಿರುವವರೆಗೆ ನಡೆಯುವುದಿಲ್ಲವೆಂಬ ಕಾರಣಕ್ಕೆ ನಿನ್ನ ಧ್ವನಿಯಡಗಿಸುವುದು ಹತ್ಯೆಯ ಹಿಂದಿನ ಸಂಚಾಗಿತ್ತೆಂದು ಇತಿಹಾಸಕಾರರು ಪುರಾವೆ ನೀಡುತ್ತಾರೆ. ನಿನ್ನ ಹಂತಕನನ್ನು ಭಾರತದ ಶ್ರೇಷ್ಠ ಸುಪುತ್ರನೆಂದು ಅಥವಾ ದೇಶಭಕ್ತನೆಂದು ಹಾಡಿ ಹೊಗಳುತ್ತಾ, ನಿನ್ನನ್ನು ಹತ್ಯೆ ಮಾಡಿ ಎಂತಹ ಉಪಕಾರ ಮಾಡಿದನೆಂಬ ಸಮಜಾಯಿಷಿ ನೀಡಿ ಪುಟಗಟ್ಟಲೆ ಬರೆದಿದ್ದೂ ಆಯಿತು. ದೇಹವು ಸುಟ್ಟು ಕರಕಲಾದ ನಂತರವೂ ನಿನ್ನನ್ನು ಮತ್ತೇ ಮತ್ತೇ ಕೊಲ್ಲುವ ಪ್ರಯತ್ನಗಳು ಇಂದಿಗೂ ನಡೆಯುತ್ತಿವೆ!! ರಾಮನ ಹೆಸರಲ್ಲಿ ಭಾರತವನ್ನು ಒಡೆಯುವ ಸಂಚಿನ ಕ್ರಮಗಳಿಗೆ ನಿನ್ನ ಒಪ್ಪಿಗೆ ಇತ್ತೆಂಬ ಬರೆದೇ ಇಲ್ಲದ ನಿನ್ನ ಪತ್ರದ ಸುಳ್ಳು ದಾಖಲೆಯಾಗಲಿ, ಒಂದು ಧರ್ಮೀಯರನ್ನು ಓಲೈಸುತ್ತಾ ಬಹು ಸಂಖ್ಯಾತರಿಗೆ ಅನ್ಯಾಯ ಮಾಡಿದೆಯೆಂದೋ, ಅಥವಾ ಭಾರತದ ಇಬ್ಭಾಗಕ್ಕೆ ಒಪ್ಪಿಗೆ ನೀಡಿ ಜನರ ಆಕ್ರೋಶಕ್ಕೆ ಗುರಿಯಾದೆಯೆಂಬ ಸುಳ್ಳಿನ ಕಥೆಗಳನ್ನೂ, ಹಾಗೂ ನಿನಗೆ ಹೆಗಲು ನೀಡಿದ ಹೆಣ್ಣುಮಕ್ಕಳ ವಿಕೃತಗೊಳಿಸಿದ ಪಟಗಳನ್ನು ಹರಿಬಿಟ್ಟು ನಿನ್ನ ಚಾರಿತ್ರ್ಯ ವಧೆಗೆ ನಡೆಸಿದ ಈ ಕೆಳಮಟ್ಟದ ಕುತಂತ್ರಗಳು ನಿನ್ನನ್ನು ಕಂಗೆಡಿಸುವುದಿಲ್ಲವೇ?

ನೀನು ತಪ್ಪುಗಳನ್ನೇ ಮಾಡಿಲ್ಲವೆಂದಲ್ಲ, ಆದರೆ ನಿನ್ನ ತಪ್ಪುಗಳು ಉದ್ದೇಶ ಪೂರಿತವಾಗಿರಲಿಲ್ಲ. ಆ ತಪ್ಪುಗಳನ್ನು ತಿದ್ದಿಕೊಳ್ಳುವ, ಕಲಿಯುವ ಮತ್ತು ಬೆಳೆಯುವ ನಿನ್ನ ಸಾಮರ್ಥ್ಯವು ಇಂದಿಗೂ ಆದರ್ಶವಾಗಿದೆ. ಜಾತೀಯತೆ ವಿರೋಧಿ ಮತ್ತು ಮಹಿಳಾ ಸ್ವಾತಂತ್ರ್ಯದ ಬೆಳಕುಗಳಿಂದ ಬೆಳಗನ್ನು ಹತ್ತಿಸಿಕೊಂಡ ಮುಕ್ತ ಮನಸ್ಸು ನಿನ್ನದಾಗಿತ್ತು.

ನಿನ್ನ ವಿಚಾರಗಳ ಜನಪ್ರಿಯತೆಯನ್ನು ಹೊಸಕಿ ಹಾಕಲು ಮತ್ತು ತಮ್ಮ ಕೈಗಂಟಿದ ರಕ್ತವನ್ನು ತೊಳೆದುಕೊಳ್ಳಲು ಅದೆಷ್ಟು ಕಥೆಗಳು! ಅದೆಷ್ಟು ಸುಳ್ಳುಗಳು!! ಬಿಡದ ಪ್ರಯತ್ನಗಳು ಅಂದಿನಿಂದ ಇಂದಿನವರೆಗೆ ನಡೆಯುತ್ತಲೇ ಬಂದಿವೆ. ಸತ್ಯವನ್ನು ಹೊಸಕಿ ಸುಳ್ಳುಗಳನ್ನು ವಿಜೃಂಭಿಸುವ ಮೂಲಕ ಜನರು ನಿನ್ನ ತತ್ವಗಳನ್ನು ಮರೆತುಬಿಡುತ್ತಾರೆಂದು ಕೊಂಡರು. ಅದು ಸಾಧ್ಯವಾಗದೆ, ಈಗ ನೀ ನಮ್ಮವ ನೀ ನಮ್ಮವನೆಂದು ಆತುಕೊಳ್ಳುತ್ತಿದ್ದಾರೆ; ರಥಯಾತ್ರೆ ಸಂದರ್ಭದಲ್ಲಿ ನಿನ್ನ ಅಪರೂಪದ ಗುಣಗಳನ್ನು ಹೊಗಳಿದ್ದು, 'ಹೊಳೆಯುವ ನವರತ್ನವೆಂದು' ಬಿರುದು ನೀಡಿ ನಿನ್ನ ಜಯಂತಿಯನ್ನು ಸಂಭ್ರಮಗೊಳಿಸಿದ್ದರ ಜೊತೆ ಜೊತೆಗೆ ಮಂದಿರ ಮಸೀದಿಗಳ ನಡುವೆ ಬಿರುಕು ತರಿಸುವ ಮತ್ತು ನಿನಗೆ ಗುಂಡಿಟ್ಟವನು ದೇಶಪ್ರೇಮಿಯೆಂಬ ಮಾತುಗಳು! ಈ ದ್ವಂದ್ವತೆಯ ಹಿಂದಿನ ಕೀಳು ರಾಜಕಾರಣವು ನಿನಗೆ ತಿಳಿಯದಿರುತ್ತದೆಯೇ?

ಕೇವಲ ಒಂದು ಪಕ್ಷವಲ್ಲ, ಒಂದು ಗುಂಪಲ್ಲ ಎಲ್ಲರೂ ನಿನ್ನನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ಮೂಲಕ ಮತ್ತೆ ಮತ್ತೆ ನಿನ್ನನ್ನು ಕೊಲ್ಲುತ್ತಿರುವ ಪರಿ ನೋಡಿ ನಿನಗೆ ನಗುವಷ್ಟೇ ಅಲ್ಲ, ನೋವೂ ಆಗುತ್ತಿರಬಹುದು; ನಿನ್ನ ಹೆಸರನ್ನು ಕುಲಕ್ಕಂಟಿಸಿಕೊಂಡು, ನೀ ಕಟ್ಟಿದ ಚಳುವಳಿಯ ನಾಮಾಂಕಿತವನ್ನು ಪಕ್ಷಕ್ಕೆ ಮೆತ್ತಿಕೊಂಡು ಜನರನ್ನು ದಿಕ್ಕು ತಪ್ಪಿಸಬಹುದೆಂದು ಗ್ರಹಿಸಿದವರು ಅಂದು ಅಧಿಕಾರಕ್ಕಾಗಿ ಸರ್ವಾಧಿಕಾರವನ್ನು ಹೇರಲು ಪ್ರಯತ್ನಿಸಿದ್ದು, ನಿನ್ನ ಮಾರ್ಗವನ್ನು ತುಳಿದ ಸತ್ಯಾಗ್ರಹಿಗಳನ್ನು ಜೈಲುಗಟ್ಟಿದ್ದು, ಉದಾರೀಕರಣದ ಹೆಸರಲ್ಲಿ ಸ್ವದೇಶಿ ಮತ್ತು ಸ್ವರಾಜ್ಯದ ವಿಚಾರಗಳನ್ನು ಮರೆತವರು – ಈಗ ಅಧಿವೇಶನದ ಶತಮಾನೋತ್ಸವದಲ್ಲಿ ನಿನ್ನನ್ನು ಬಹು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಿರುವ ಇವರು ನಿಜಕ್ಕೂ ನನ್ನ ಬೇರುಗಳೇ ಎಂದು ನೀನು ಚಿಂತಿಸುತ್ತಿರಬಹುದು.


ನಿನ್ನ ಹತ್ಯೆಯು ಇತಿಹಾಸದ ಬಹು ನಿರ್ಣಾಯಕ ಘಳಿಗೆಯಾಗಿ ಉಳಿದಿದೆ. ನಿನ್ನೆದೆಗೆ ತಾಕಿದ ಗುಂಡುಗಳು ಇಡೀ ದೇಶದ ಜನರನ್ನು ಘಾಸಿಗೊಳಿಸಿತು. ನೋವಲ್ಲಿದ್ದ ಜನರು ಅದರ ಹಿಂದಿದ್ದವರನ್ನು ಕ್ಷಮಿಸುವುದಿಲ್ಲವೆಂದು ತಿಳಿದ ಕೂಡಲೇ ಭಾರತವನ್ನು ಸರ್ವಾಧಿಕಾರದ ಮಾರ್ಗದಲ್ಲಿ ಕೊಂಡೊಯ್ಯಲು ಕಾದಿದ್ದವರು ಬಹುಕಾಲ ತಟಸ್ಥವಾಗಬೇಕಾಯಿತು. ಆದ್ದರಿಂದಲೇ ಈ ದೇಶವು ಪ್ರಜಾಪ್ರಭುತ್ವವನ್ನು ಅನುಭವಿಸಲು ಸಾಧ್ಯವಾಯಿತು ಎನ್ನುವುದು ಅಂತರಂಗದ ಮಾತು. ಪ್ರಪಂಚದಲ್ಲಿ ಘರ್ಷಣೆಗಳು ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಅಹಿಂಸಾ ತತ್ವವು ಜಗತ್ತಿನಾದ್ಯಂತ ಪ್ರತಿಧ್ವನಿಸಿ ಹೆಚ್ಚಿನವರು ನಿನ್ನ ಮಾರ್ಗವನ್ನು ಅನುಸರಿಸ ಬಯಸುತ್ತಿದ್ದರೆ, ನಿನ್ನನ್ನು ಕೊಂದೆವೆಂದುಕೊಂಡವರು ವಿಚಲಿತರಾಗುತ್ತಿದ್ದಾರೆ.

ತತ್ವಹೀನ ರಾಜಕೀಯ, ದುಡಿಯದೆ ಬರುವ ಸಂಪತ್ತು, ನೈತಿಕತೆ ಇಲ್ಲದ ವ್ಯಾಪಾರ, ಗುಣ ಬೆಳೆಸದ ಶಿಕ್ಷಣ, ಆತ್ಮಸಾಕ್ಷಿ ಇಲ್ಲದ ಆನಂದ, ಮಾನವೀಯತೆ ಇಲ್ಲದ ವಿಜ್ಞಾನ ಮತ್ತು ತ್ಯಾಗವಿಲ್ಲದ ಪೂಜೆ ಇವುಗಳನ್ನು ತಿರಸ್ಕರಿಸುವ ನಿನ್ನ ಸಪ್ತನೀತಿಗಳಿಂದ ಈ ಆಧುನಿಕ ಜಗತ್ತು ಕಲಿಯುವುದು ಬಹಳವಿದೆ ಮತ್ತು ಕಲಿಯುತ್ತದೆ ಕೂಡ.

ಅಹಿಂಸಾ ತತ್ವವು ಜನಾಂಗ, ಧರ್ಮ, ರಾಷ್ಟ್ರಗಳ ಗಡಿಗಳನ್ನು ಮೀರಿ ಜಾಗತಿಕ ಜಾಗೃತಿಯಾಗಿ ಬೆಳೆದು ನೀನು ಸಾರ್ವಕಾಲಿನ ಶರಣನಾಗಿ ಹೊರಹೊಮ್ಮಿದ್ದಿಯಾ. ಅಹಿಂಸೆಯ ಆಚರಣೆ ಹಾಗೂ ಮಾನವತಾವಾದದ ಉತ್ಕಟ ಅನುಸರಣೆಗಾಗಿ ಪ್ರಪಂಚದ ಎಲ್ಲೆಡೆ ನಿನ್ನನ್ನು ಸ್ಮರಿಸಲಾಗುತ್ತಿದೆ ಎನ್ನುವುದು ತಿಳಿದವರ ಮಾತಾಗಿದ್ದು, ಪ್ರಸ್ತುತದ ಭಾರತಕ್ಕೆ ನಿನ್ನ ಅಹಿಂಸಾ ತತ್ವದ ಬೆಳಕು ಮಾತ್ರವೇ ಬೆಳದಿಂಗಳನ್ನು ತರಬಲ್ಲದು.

ಲತಾಮಾಲ, ಬೆಂಗಳೂರು

(ಲೇಖನ ಕೃಪೆ : ಕನ್ನಡ ಪ್ಲಾನೆಟ್ .ಕಾಮ್)



ಶ್ರೀರಂಗಪಟ್ಟಣದಲ್ಲಿ ಸರ್ವೋದಯ ಮೇಳ

ಕುಂಭಮೇಳ, ಯಾಂಬು ಮತ್ತು ಗಾಂಧೀಜಿ:

– ನಾಗೇಶ್ ಹೆಗಡೆ

ಕೃತಕ ಬುದ್ಧಿಮತ್ತೆಯ ಈ ಯುಗದಲ್ಲಿ ಗಾಂಧೀಜಿಯ ಪ್ರಸ್ತುತತೆ ಏನು? ಈ ವಿಷಯ ಕುರಿತು ನಾನು ಇಂದು ಶ್ರೀರಂಗಪಟ್ಟಣದಲ್ಲಿ ಉಪನ್ಯಾಸ ಕೊಡಲು ಹೋಗಿದ್ದೆ.

ಮಹಾತ್ಮಾ ಗಾಂಧೀಜಿಯವರ ಚಿತಾಭಸ್ಮದ ಒಂದು ಕರಂಡಿಕೆಯನ್ನು 12, ಫೆಬ್ರುವರಿ 1948ರಂದು ಶ್ರೀರಂಗಪಟ್ಟಣದ ಬಳಿಯ ಪಶ್ಚಿಮವಾಹಿನಿ ಯಲ್ಲಿ ವಿಸರ್ಜನೆ ಮಾಡಲಾಗಿತ್ತು. (ಅದಾಗಿ ಎರಡು ದಿನಗಳ ನಂತರ ನಾನು ಜನಿಸಿದೆ ಎಂಬುದು ಹಳೇ ಕತೆ).

ಚಿತಾಭಸ್ಮದ ಆ ನೆನಪಿಗಾಗಿ ಪ್ರತಿವರ್ಷವೂ ಅಲ್ಲಿನ ಸರ್ವೋದಯ ಸಂಘದ ಪದಾಧಿಕಾರಿಗಳು ಗಾಂಧೀಜಿಯ ಸ್ಮರಣಾ ಕಾರ್ಯಕ್ರಮ, ಉಪನ್ಯಾಸವನ್ನು ಏರ್ಪಡಿಸುತ್ತಾರೆ. ಈ ವರ್ಷ ಮೇಲ್ಕಂಡ ವಿಷಯದ ಬಗ್ಗೆ ಮಾತಾಡಲು ನನಗೆ ಡಾ. ಸುಜಯ್ ಕುಮಾರ್ ಆಹ್ವಾನಿಸಿದ್ದರು. ನನ್ನ ಮಾತಿನ ಸಂಕ್ಷಿಪ್ತ ವರದಿ ಇಲ್ಲಿದೆ.

ಇಂದು ಫೆಬ್ರುವರಿ 11ರಂದು ಏನೆಲ್ಲ ಮುಹೂರ್ತಗಳು ಒಟ್ಟಾಗಿ ಮೇಳೈಸಿವೆ. ಏಐ ಎಂಬ 'ಯಾಂತ್ರಿಕ ಬುದ್ಧಿಮತ್ತೆ' (ಯಾಂಬು) ಕುರಿತ ಪ್ರಥಮ ಜಾಗತಿಕ ಶೃಂಗಸಭೆ ಪ್ಯಾರಿಸ್ಸಿನಲ್ಲಿ ನಡೆಯುತ್ತಿದೆ. ಅದನ್ನು ಹೇಗೆ ನಿಯಂತ್ರಿಸಬಹುದು, ಹೇಗೆ ಮನುಕುಲಕ್ಕೆ ಉಪಕಾರಿ ಆಗುವಂತೆ ಮಾಡಬಹುದು ಎಂದು ನಿರ್ಧರಿಸಲು ನಮ್ಮ ಪ್ರಧಾನಿ ಮೋದಿಯವರೂ ಸೇರಿದಂತೆ ಅನೇಕ ರಾಷ್ಟ್ರಗಳ ನಾಯಕರು ಅಲ್ಲಿ ಸೇರಿದ್ದಾರೆ. ಏಐ ಕ್ರಾಂತಿಯ ಪ್ರಮುಖ ರೂವಾರಿಗಳಾದ ಸತ್ಯ (ಮೈಕ್ರೊಸಾಫ್ಟ್) ಮತ್ತು ಸುಂದರ್ (ಗೂಗಲ್) ಕೂಡ ಇದ್ದಾರೆ. ಏಐ ಸಂಶೋಧನೆಯ ಲಾಭ ಭಾರತದಂಥ ದೇಶಗಳಿಗೂ ಸಿಗಬೇಕು ಎಂದು ನಮ್ಮ ಪ್ರಧಾನಿ ವಾದಿಸಲಿದ್ದಾರೆ ಎಂದು ವರದಿಗಳು ಹೇಳುತ್ತಿವೆ.

ಇತ್ತ ಬೆಂಗಳೂರಿನಲ್ಲಿ ಎಲ್ಲೆಡೆ ಹೈಟೆಕ್ ಭರಾಟೆಯೋ ಭರಾಟೆ. ಏರೋ ಶೋ ಆರಂಭವಾಗಿದೆ. 19 ರಾಷ್ಟ್ರಗಳ ಉನ್ನತ ತಂತ್ರಜ್ಞಾನದ ಉದ್ಯಮಿಗಳ ಮೇಳವೂ ಇಲ್ಲಿ ಆರಂಭಾಗಿದೆ. ಇದೇ ವೇಳೆಯಲ್ಲಿ ಅತ್ತ ವಿಶ್ವದ ಅತಿದೊಡ್ಡ ಕುಂಭ ಮೇಳದಲ್ಲಿ 300 ಕಿ.ಮೀ ಉದ್ದದ ಟ್ರಾಫಿಕ್ ಜಾಮ್ ಆಗಿದೆ. ಶ್ರೀರಂಗಪಟ್ಟಣಕ್ಕೆ ಸಮೀಪದ ತ್ರಿವೇಣೀ ಸಂಗಮದಲ್ಲೂ ಕುಂಭ ಮೇಳದ ಮಾದರಿಯ ಉತ್ಸವ ಆರಂಭವಾಗಿದ್ದು ಇಲ್ಲೂ ಸಮೀಪದ ಟಿ. ನರಸೀಪುರದ ಆಸುಪಾಸು ಟ್ರಾಫಿಕ್ ಜಾಮ್ ಆಗಿರುವ ವರದಿಗಳು ಬರುತ್ತಿವೆ.

ಏರೋಶೋ, ಟೆಕ್ನೋಮೇಳಕ್ಕೂ ಟ್ರಾಫಿಕ್ ಜಾಮ್. ಸನಾತನ ಪರಂಪರೆಯ ಮೇಳಕ್ಕೂ ಟ್ರಾಫಿಕ್ ಜಾಮ್. ಅತ್ತ ಪ್ಯಾರಿಸ್ಸಿನ ಏಐ ಮೇಳವನ್ನೂ ಸೇರಿಸಿದರೆ ನಿನ್ನೆ, ಇಂದು, ನಾಳೆಗಳ ತ್ರಿವೇಣೀ ಸಂಗಮ ಇಂದೇ ಆಗುತ್ತಿದೆ.

ಕುಂಭಮೇಳದ ಸಂದಣಿ ಮತ್ತು ಜಲಮಾಲಿನ್ಯದ ಬಗ್ಗೆ ನಾನು ಮಾತಾಡಿದರೆ ಭಕ್ತಾದಿಗಳಿಗೆ ಕೋಪ ಬರುತ್ತದೆ. ಗಾಂಧೀಜಿ 1915ರಲ್ಲಿ ಹರದ್ವಾರಕ್ಕೆ ಹೋಗಿದ್ದರು. 'ಆಸೆ ಇಟ್ಕೊಂಡು ಹೋಗಿದ್ದೆ. ತುಂಬ ದುಃಖ ಆಯ್ತು. ಅಲ್ಲಿ ಎಲ್ಲೆಲ್ಲೂ ಕೊಳಕು ತುಂಬಿತ್ತು; ಭೌತಿಕವಾಗಿ, ನೈತಿಕವಾಗಿ, ಧರ್ಮದ ಹೆಸರಲ್ಲಿ ಏನೆಲ್ಲ ಗಲೀಜು. ಅಲ್ಲೇ ಶೌಚ ಮಾಡ್ತಾರೆ, ಕೊಳೆ ತೊಳ್ಕೋತಾರೆ, ಮುಳುಗು ಹಾಕ್ತಾರೆ. ಆಮೇಲೆ ಅದನ್ನೇ ಪವಿತ್ರ ನೀರು ಅಂತ ಮನೆಗೂ ಒಯ್ಯುತ್ತಾರೆ. ದೇವರ ಸೃಷ್ಟಿಯ ಅದ್ಭುತವನ್ನು ಆಸ್ವಾದಿಸುವ ಬದಲು, ಧರ್ಮಕ್ಕೆ, ಸೃಷ್ಟಿಗೆ, ಶುಚಿತ್ವಕ್ಕೆ ಅಪಚಾರ ಮಾಡ್ತಾರೆ. ಎಂದು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದಿದ್ದರು ಅವರು.

ಜಲಮಾಲಿನ್ಯದ ಬಗ್ಗೆ ನಮ್ಮ ದೇಶದಲ್ಲಿ ದಾಖಲಾದ ಮೊದಲ ಹೇಳಿಕೆ ಅದಾಗಿತ್ತು.

ಇಂದು ಪ್ರಯಾಗ್‌ರಾಜ್ ಕುಂಭಮೇಳದಲ್ಲಿ ಸೇರಿದ್ದಕ್ಕಿಂತ ಕಡಿಮೆ ಜನರು ಅಂದು ಇಡೀ ಭಾರತದಲ್ಲಿದ್ದರು. ಆಗಲೇ ಮಾಲಿನ್ಯದ ಎಚ್ಚರಿಕೆಯನ್ನು ಗಾಂಧೀಜಿ ನೀಡಿದ್ದರು. ಆ ವಿಷಯ ಹಾಗಿರಲಿ. ಈಗ ಮೂರು ಮಹಾ ಅಲೆಗಳ ತ್ರಿವೇಣೀ ಸಂಗಮ ಆಗುವುದನ್ನು ಇಡೀ ಜಗತ್ತು ನೋಡುತ್ತಿದೆ. ಒಂದು ಅಭಿವೃದ್ಧಿಯ ಅಲೆ, ಇನ್ನೊಂದು ತಾಪಮಾನ ಏರಿಕೆಯ ಅಲೆ ಮತ್ತು

ಮೂರನೆಯದು ಏಐ (ಯಾಂಬು) ಎಂಬ ಅಲೆ.

ಈ ಅಲೆಗಳ ಮಧ್ಯೆ ಗಾಂಧೀಜಿ ಹೇಗೆ ಪ್ರಸ್ತುತ?

2012ರಲ್ಲಿ ಗುಜರಾತಿನ ಪೋರ್‌ಬಂದರಿನಲ್ಲಿ 143ನೇ ಗಾಂಧೀಜಯಂತಿಯ ದಿನ ಅಂದಿನ ಮುಖ್ಯಮಂತ್ರಿ ಮೋದಿಯವರು ಹಾಜರಿದ್ದರು. ಗಾಂಧೀಜಿಯ ಗುಣಗಾನ ಮಾಡುತ್ತ ಅವರು, 'ಇಂದಿನ ಎಲ್ಲ ಜಾಗತಿಕ ಸಮಸ್ಯೆಗಳಿಗೆ, ತಾಪಮಾನ ಏರಿಕೆಯ ಸಮಸ್ಯೆಗೂ ಗಾಂಧೀಜಿಯವರ ತತ್ವಾದರ್ಶಗಳಲ್ಲಿ ಉತ್ತರ ಇದೆ' ಎಂದು ಘೋಷಿಸಿದ್ದರು.

ಆಮೇಲೆ ಅವರು ಪ್ರಧಾನಿ ಆದ ನಂತರ ಸೂರತ್‌ನಿಂದ ಮುಂಬೈಗೆ ದೇಶದ ಮೊದಲ ಬುಲೆಟ್ ಟ್ರೇನ್ ಓಡಿಸುವ ಕನಸಿಗೆ ಚಾಲನೆ ಕೊಟ್ಟರು.

ಗಾಂಧೀಜಿಯನ್ನು ಟ್ರೇನ್‌ನಿಂದ ಕೆಳಕ್ಕೆ ನೂಕಿದ ಮೊದಲ ಉದಾಹರಣೆ ನಮಗೆ ಗೊತ್ತೇ ಇದೆ.

ಇಂದು ಗಾಂಧೀಜಿಯ ಬಗ್ಗೆ ಇಂಟರ್ನೆಟ್‌ನಲ್ಲಿ, ಯೂಟ್ಯೂಬ್ ಮತ್ತಿತರ ಸಾಮಾಜಿಕ ಮಾಧ್ಯಮಗಳಲ್ಲಿ ಅದೆಷ್ಟೊಂದು ಕ್ರೂರ ಮಾತುಗಳು, ಸೆನ್ಸಾರ್ ಆಗಬೇಕಿದ್ದ ಸುಳ್ಳಿನ, ದ್ವೇಷದ ಸರಮಾಲೆಗಳು ಕಾಣಸಿಗುತ್ತವೆ. ಗಾಂಧೀಜಿಗೆ ಕೋಡು ಮೂಡಿಸಿ, ಕೋರೆದಾಡೆಗಳನ್ನು ಹಚ್ಚಿ ಲೇವಡಿ ಮಾಡಲಾಗುತ್ತಿದೆ. ಗೋಡ್ಸೆ, ಸಾವರ್ಕರ್ ಅವರನ್ನು ದೈವತ್ವಕ್ಕೇರಿಸಿದ ಸುಳ್ಳುಸಂಗತಿಗಳಿಗೆ ಎಷ್ಟೆಲ್ಲ ಲೈಕ್‌ಗಳು, ಮೂಢಮಾನ್ಯತೆಗಳು ಸಿಗುತ್ತಿವೆ. ಅವೆಲ್ಲ ಏಐ ಸಹಾಯದಿಂದ ಹೆಣೆದ ಬಿಂಬಗಳು.

ಬದುಕಿನುದ್ದಕ್ಕೂ ಧಾರ್ಮಿಕತೆ, ಅಧ್ಯಾತ್ಮ, ನೈತಿಕ ಬದುಕಿನ ಅಗತ್ಯವನ್ನು ಪ್ರತಿಪಾದಿಸಿ, ಸಾಯುವ ಕ್ಷಣದಲ್ಲೂ ಹೇರಾಮ್ ಎನ್ನುತ್ತಲೇ ಉಸಿರು ಚೆಲ್ಲಿದ ಮಹಾತ್ಮನಿಗೆ ಈಗ ರಾಮಭಕ್ತರಿಂದಲೇ ನಾನಾ ಬಗೆಯ ಛೀಮಾರಿ ಸಿಗುತ್ತಿದೆ. ಗಾಂಧೀಜಿಯನ್ನು ಕೊಂದವನೇ ಮಹಾತ್ಮ ಎಂಬಷ್ಟರ ಮಟ್ಟಿಗೆ ಯುವಜನರ ಮನಸ್ಸನ್ನು ಕೆಡಿಸುವ ಯತ್ನ ನಡೆಯುತ್ತಿದೆ.

ಏಐ ಬಳಸಿಕೊಂಡು ನಮ್ಮಲ್ಲಿನ ಕಾಮ, ಕ್ರೋಧ, ಲೋಭ, ಮದ, ಮತ್ಸರ ಎಲ್ಲವನ್ನೂ ಕೆಣಕಿ ವಿಕೃತ ಸಮಾಜವೊಂದನ್ನು ರೂಪಿಸುವ ಯತ್ನ ನಡೆಯುತ್ತಿದೆ. ಕೆಟ್ಟದ್ದನ್ನೇ ನೋಡುವ ಅಭಿರುಚಿ ನಿಮ್ಮದಾಗಿದ್ದರೆ ಮತ್ತೆ ಮತ್ತೆ ಅದನ್ನೇ ತೋರಿಸುವಂಥ ಅಲ್ಗೊರಿದಂ ರೂಪುಗೊಂಡಿದೆ. ಅದರ ಹಿಂದೆ ಕರಾಳ ವ್ಯಾಪಾರೀ ಮನಸ್ಸು ಅಡಗಿದೆ. ಅಲ್ಲಿ ಸತ್ಯಕ್ಕೆ ಬೆಲೆಯಿಲ್ಲ. ವೈಯಕ್ತಿಕ ಖಾಸಗಿ ಬದುಕಿಗೆ ಬೆಲೆಯಿಲ್ಲ. ಸ್ವಾಭಿಮಾನಕ್ಕೆ ಬೆಲೆಯಿಲ್ಲ; ಸಮಾನತೆಗೆ ಬೆಲೆಯಿಲ್ಲ. ಮಾನವ ಕೌಶಲಕ್ಕೆ ಬೆಲೆಯಿಲ್ಲ; ನೈತಿಕತೆಗೂ ಬೆಲೆಯಿಲ್ಲ, ಅಹಿಂಸೆಗೂ ಬೆಲೆಯಿಲ್ಲ.

ಈ ಹಿನ್ನೆಲೆಯಲ್ಲಿ ಗಾಂಧೀಜಿ ಪ್ರತಿಪಾದಿಸಿದ ಸತ್ಯ, ಅಹಿಂಸೆ, ಸಹಿಷ್ಣುತೆ, ಸಾಮಾಜಿಕ ನ್ಯಾಯ ಇವಕ್ಕೆಲ್ಲ ಸ್ಥಾನ ಎಲ್ಲುಳಿದಿದೆ?.

'ಕೆಟ್ಟದ್ದನ್ನು ನೋಡಲಾರೆ, ಕೇಳಲಾರೆ, ಮಾತಾಡಲಾರೆ' ಎಂಬ ಗಾಂಧೀಜಿಯ ಮೂರು ಮಂಗಗಳ ಸಾಲಿಗೆ ನಾಲ್ಕನೆಯ ಒಂದು ಮಂಗವನ್ನೂ ಸೇರಿಸಬೇಕಾಗಿದೆ. ಅದು ತಲೆತಗ್ಗಿಸಿ ಮೊಬೈಲನ್ನು ಸ್ವೈಪ್ ಮಾಡುತ್ತಿರುವ ಮಂಗ.

ಶುಚಿತ್ವಕ್ಕೆ ಅಷ್ಟೊಂದು ಮಹತ್ವ ಕೊಟ್ಟ ಗಾಂಧೀಜಿಯವರ ನಾಡಿನಲ್ಲಿ ಬಹುತೇಕ ಎಲ್ಲ ನದಿಗಳೂ ಕೆರೆಗಳೂ ಕೊಳಕಿನ ಮಡುಗಳಾಗಿವೆ. ಅಂತಾರಾಷ್ಟ್ರೀಯ ಪರಿಸರ ಪ್ರಜ್ಞೆಯ ಶ್ರೇಯಾಂಕ ಪಡೆದ 180 ದೇಶಗಳಲ್ಲಿ ನಮ್ಮದು ಅತ್ಯಂತ ಕೆಳಸ್ತರದ 176ನೇ ರಾಷ್ಟ್ರ ಎನಿಸಿದೆ.

ಸರಳ ಬದುಕಿನ ಬಗ್ಗೆ ಗಾಂಧೀಜಿ ಹೇಳಿದ್ದರು. ಇಂದು ಸರಳತೆ ಎಂಬುದೇ ಹಳೇ ಫ್ಯಾಶನ್ ಆಗಿದೆ. ಇಎಮ್ ಐ ಕಟ್ಟಿ, ಮಜಾ ಮಾಡಿ ಎಂಬುದೇ ಕಾರ್ಪೊರೇಟ್ ತಜ್ಞರ ಮಂತ್ರವಾಗಿದೆ.

ಯಂತ್ರಗಳ ದಾಸ್ಯತ್ವ ಸಲ್ಲದೆಂದು ಗಾಂಧೀಜಿ ಹೇಳಿದ್ದರು. ಸಾವಿರ ಜನರ ಕೆಲಸಗಳನ್ನು ತಾನೊಬ್ಬನೇ ಮಾಡುವ ಯಂತ್ರದ ಬದಲು ಸಾವಿರ ಕೈಗಳಿಗೆ ಉದ್ಯೋಗ ಕೊಡುವ ವ್ಯವಸ್ಥೆ ಬರಬೇಕಿದೆ ಎಂದಿದ್ದರು. ಆದರೆ ನಾವಿಂದು ಚಾಲಕರಿಲ್ಲದೆ ಓಡುವ ಮೆಟ್ರೋ ರೇಲ್ವೆ ಎಂಜಿನ್ನುಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ನೆಲ ಒರೆಸುವ ಯಂತ್ರಗಳ ಮಾರಾಟದ ಭರಾಟೆ ಜೋರಾಗಿದೆ.

ಸ್ವಾವಲಂಬನೆಯ ಪಾಠ ಹೇಳಿದ್ದರು ಗಾಂಧೀಜಿ. ಆದರೆ ನಮ್ಮ ಮಕ್ಕಳು ಸಣ್ಣಪುಟ್ಟ ನಿಬಂಧ ಬರೆಯಲಿಕ್ಕೂ ಗಣಿತದ ಹೋಮ್ ವರ್ಕ್ ಮಾಡಲಿಕ್ಕೂ ಚಾಟ್‌ಜಿಪಿಟಿ ನೆರವು ಪಡೆಯುತ್ತಿದ್ದಾರೆ. ಅಡುಗೆ ಮಾಡುವಂತ ಮನೆಕೆಲಸಗಳಿಗೂ ಅಸ್ಸಾಂ, ಝಾರ್ಖಂಡ್, ಬಿಹಾರ್‌ಗಳಿಂದ ಬರುವವರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ.

ಗ್ರಾಮಗಳಲ್ಲೇ ಭಾರತದ ಭವಿಷ್ಯ ಅಡಗಿದೆ ಎಂದು ಗಾಂಧೀಜಿ ಹೇಳಿದ್ದರು. ಆದರೆ ನಗರಗಳೇ ಅಭಿವೃದ್ಧಿಯ ಎಂಜಿನ್‌ಗಳೆನಿಸಿವೆ. ಇಂದು ದೇಶದ ಎಲ್ಲ ಕಡೆ ಹಳ್ಳಿಗಳನ್ನು ಖಾಲಿ ಮಾಡಿಸುವ ತಂತ್ರಗಳೇ ಕಾಣುತ್ತಿವೆ. ಮೈಸೂರು-ಬೆಂಗಳೂರಿನ ಮಧ್ಯೆ ನಿರ್ಮಾಣವಾದ ಎಕ್ಸ್‌ಪ್ರೆಸ್ ಹೆದ್ದಾರಿಯ ಕಾರಣದಿಂದಾಗಿ ನಡುವೆ ಸಿಗುತ್ತಿದ್ದ ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು ಪಟ್ಟಣಗಳಲ್ಲಿ ನೂರಿನ್ನೂರು ಕುಟುಂಬಗಳು, ಚಿಕ್ಕಪುಟ್ಟ ವಹಿವಾಟು ನಡೆಸುತ್ತಿದ್ದ ಸಾವಿರಾರು ಜನರು ಕೆಲಸ ಕಳೆದುಕೊಂಡಿದ್ದಾರೆ.

ಮಹಾ ತೆರೆಯೊಂದು ಸಮುದ್ರದಲ್ಲಿ ಎದ್ದಾಗ ಒಂದೋ ಆ ತೆರೆಯ ಮೇಲೆ ಸವಾರಿ ಮಾಡಿ ದೂರದವರೆಗೆ ಪಯಣಿಸಿ ಬಚಾವಾಗಬಹುದು. ಅಥವಾ ತೆರೆಯ ಅಡಿಗೆ ಸಿಲುಕಿ ಅಪ್ಪಚ್ಚಿ ಆಗಬೇಕು. ಈಗ ಒಂದಲ್ಲ, ಎರಡಲ್ಲ, ಮೂರು ತೆರೆಗಳು ಬರುತ್ತಿವೆ.


ಏಐ ತೆರೆಯ ಅಬ್ಬರದಿಂದಾಗಿ ಡಾಕ್ಟರು, ವಕೀಲರು, ಎಂಜಿನಿಯರುಗಳು, ತೆರಿಗೆತಜ್ಞರು, ರೇಡಿಯಾಲಜಿಸ್ಟ್‌ಗಳು, ಆಹಾರ ತಜ್ಞರು, ಔಷಧ ತಯಾರಕರು, ಶಿಕ್ಷಕರು, ಕಲಾವಿದರು, ಕತೆ-ಕಾದಂಬರಿ ಸಾಹಿತಿಗಳು, ಚಲನಚಿತ್ರ ತಯಾರಕರು ಕೆಲಸ ಕಳೆದುಕೊಳ್ಳುತ್ತಾರೆ. ನಿರುಪಯೋಗಿ ಸಮಾಜವೊಂದು ಸೃಷ್ಟಿಯಾಗುತ್ತದೆ.

ಪ್ರಾಯಶಃ ಆಗ ನಾವೆಲ್ಲ ಕೊನೆಯ ಆಸರೆಯಾಗಿ, ಹಳ್ಳಿಗೆ ಹಿಂದಿರುಗಬಹುದು. ತಾಪಮಾನ ಏರಿಕೆ ಮತ್ತು ಅಭಿವೃದ್ಧಿಯ ಝಳವೆಂಬ ಇನ್ನೆರಡು ಅಲೆಗಳಿಂದ ತಪ್ಪಿಸಿಕೊಳ್ಳುವ ತಾಣ ಅದೊಂದೇ ಆಗಬಹುದು. ಆ

ಗಾಂಧೀಜಿ ಹೇಳಿದ ಸರಳ, ಸ್ವಾವಲಂಬನೆಯ ಗ್ರಾಮಸ್ವರಾಜ್ಯ, (ಮರುಬಳಕೆಯ) ವರ್ತುಲ ಆರ್ಥಿಕತೆ, ಸುಸ್ಥಿರ ಅಭಿವೃದ್ಧಿ, ಸಕಲ ಧರ್ಮಗಳನ್ನು ಆದರಿಸುವ ಸಮಸಮಾಜದ ನಿರ್ಮಾಣಕ್ಕೆ ಅದು ದಾರಿ ಮಾಡಿಕೊಡಬಹುದು.

ಗಾಂಧಿಯನ್ನು ಯಾರೆಷ್ಟೇ ಬಾರಿ ಕೊಂದರೂ ಅವರು ಮತ್ತೆ ಮತ್ತೆ ನಮ್ಮೆದುರು ಬರುತ್ತಿರುತ್ತಾರೆ. ಪುಕ್ಕಟೆ ಅಲ್ಲ, ಐನ್‌ಸ್ಟೀನ್ ಹೇಳಿದ್ದು: 'ಇಂಥ ಒಬ್ಬ ವ್ಯಕ್ತಿ ಈ ಭೂಮಿಯ ಮೇಲೆ ಜೀವಂತ ಓಡಾಡಿದ್ದ ಎಂಬುದನ್ನು ನಂಬಲು ಮುಂದಿನ ಪೀಳಿಗೆಗೆ ಕಷ್ಟವಾಗಬಹುದು' ಎಂದು.

ಕಷ್ಟ ಹೌದು. ಆದರೆ ಕಷ್ಟ ಬಂದಾಗ ಅವರು ಅನಿವಾರ್ಯವೂ ▪



ಶ್ರೀಸಾಮಾನ್ಯರ ದೀಕ್ಷಾ ಗೀತೆ


ಭಾರತ ಜನವರಿ 26, 1950 ರಂದು ಗಣರಾಜ್ಯವಾಯಿತು ಎಂದು ಘೋಷಿಸಲ್ಪಟ್ಟಾಗ ಶ್ರೀ ಕುವೆಂಪು ಅವರು ರಚಿಸಿದ 'ಶ್ರೀ ಸಾಮಾನ್ಯರ ದೀಕ್ಷಾಗೀತೆ',

ಶ್ರೀಸಾಮಾನ್ಯ'ವೆ ಭಗವನ್ ಮಾನ್ಯಂ;
'ಶ್ರೀಸಾಮಾನ್ಯ' ನೆ ಭಗವದ್ ಧನ್ಯಂ!
ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ದಿಟ ಭಗವತ್ ಪ್ರೀತಿ!
ಸಾಮಾನ್ಯರೋ ನಾವು:
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ ನೀವೂ!
ಸರ್ವರಿಗಾಗಿಯೆ ಸರ್ವವ ತನ್ನಿಮ್;
"ಸರ್ವರಿನೆನಗೆ! ಸರ್ವರಿಗೆನ್ನಿಂ!
ಸರ್ವರಿಗಾಗಿಯೆ ಸರ್ವಂ!" ಎನ್ನಿಂ.
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ಶ್ರೀ ದೀಕ್ಷೆಯ ಕೊಳ್ಳಿಂ!

ಕೊನೆಗಂಡಿತೊ ಓರೊರ್ವರ ಗರ್ವದ ಕಾಲ,
ಇದು ಸರ್ವರ ಕಾಲ!
"ಸರ್ವೋದಯ!" "ಸರ್ವೋದಯ!"
ಸರ್ವೋದಯ ಯುಗಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!
ಮೇಲಿಲ್ಲವೊ ಕೀಳಿಲ್ಲವೊ
ಸರ್ವ ಸಮಾನದ ರಾಜ್ಯ:
ಅಧ್ಯಕ್ಷನೊ ಸೇನಾನಿಯೊ
ಕಮ್ಮಾರನೊ ಚಮ್ಮಾರನೊ
ಕಾಯಕವೆಲ್ಲವು ಪೂಜ್ಯ!
ಕೈಗಾರನೊ ಕಲೆಗಾರನೊ
ಇರ್ವರಿಗೂ ಸಮಭೋಜ್ಯ;
ಇನ್ನಿಲ್ಲವೊ ಅಹಮಹಮಿಕೆ,
ತರತಮಗಳ ವ್ಯಾಜ್ಯ!
ಉಣಿಸಿಗೆ ಮೇಣ್ ಉಡುಪಿಗೆ ಮೇಣ್
ಆರಾಗಲಿ ಆರಡಿಯನ್
ಹಿಡಿಯುವುದಿನ್ ತ್ಯಾಜ್ಯ!
ಲೌಕಿಕದೊಳ್ ಲೌಕಿಕರಿಗೆ
ಆರಾಗಲಿ ಆರಡಿಯೊಳ್
ಹೊರಳುವುದಿನ್ 'ಪೂಜ್ಯ'!
ಇದು ಲೌಕಿಕ ರಾಜ್ಯ!!!!!



~ಕುವೆಂಪು



ಅದು ದೂರದ ಕೆನಡಾದ ವ್ಯಾಂಕೋವರ್ ದ್ವೀಪಕ್ಕೆ ನಾನು ಎಂ.ಬಿ.ಎ. ವ್ಯಾಸಂಗಕ್ಕೆಂದು ತೆರಳಿದ್ದ ಸಮಯ. 24 ಗಂಟೆಗಳ ವಿಮಾನಯಾನ ಮುಗಿಸಿ ಅರ್ಧ ಭೂಮಿ ಸುತ್ತಿದ್ದ ಸುಸ್ತು ಹೆಗಲೇರಿತ್ತು. ಯೂನಿವರ್ಸಟಿಗೆ ಬಂದ ಮೊದಲನೆಯ ದಿವಸದ ನೋಂದಣಿ ಕೆಲಸಗಳಿಗಾಗಿ ಅಲ್ಲಿನ 'ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಮಾಹಿತಿ ಕೇಂದ್ರ' ಎಂಬ ಬೋರ್ಡು ಹೊತ್ತ ಗಾಜಿನ ಮೈಯ ಕಟ್ಟಡದೊಳಗೆ ಹೋದೆ. ಒಳಹೊಕ್ಕ ಕೂಡಲೇ ಕಂಡಿದ್ದು ಜಗತ್ತಿನ ಎಲ್ಲಾ ದೇಶಗಳ ಬಾವುಟಗಳ ಸಂಗ್ರಹ, ಹಾಲ್ಬಿಳಿಯ ನಗುಮೊಗದ ಒಬ್ಬಳು ಕ್ಲರ್ಕು ಮತ್ತವಳ ಹಿಂದಿನ ದೊಡ್ಡ ಗೋಡೆಯ ಮೇಲೆ ನಗುತ್ತಿದ್ದ ಗಾಂಧಿಯ ಬೃಹತ್ ಭಾವಚಿತ್ರ. ಸಾಗರದಾಚೆ ನಮ್ಮ ರಾಷ್ಟ್ರನಾಯಕರ ಮುಖವ ಕಂಡು ನನಗಾದ ಮಹದಾನಂದ ಹೇಳತೀರದು! ಆಕೆಯ ಬಳಿ ಹೋಗಿ, "ಗಾಂಧಿಯ ಇಷ್ಟು ದೊಡ್ಡ ಚಿತ್ರವನ್ನು ಇಲ್ಲಿ ಹಾಕಲು ಕಾರಣವೇನು... ಅವರ ಬಗ್ಗೆ ನಿಮಗೆ ಎಷ್ಟು ಗೊತ್ತು?" ಎಂದು ತೀವ್ರ ಕುತೂಹಲದಿಂದ ಕೇಳಿದೆ. ಅದಕ್ಕವಳು ಆ ಭಾವಚಿತ್ರದ ಕೆಳಗೆ ಬರೆದಿದ್ದ ಸಾಲನ್ನು ಓದುತ್ತಾ... "An Eye for an Eye only ends up making the whole world blind" ಅಂತ ಗಾಂಧಿ ಹೇಳಿದ್ದಾರೆ. ಗಾಂಧಿ ಬಗ್ಗೆ ಹೆಚ್ಚಿಗೆ ಗೊತ್ತಿಲ್ಲ, ಆದ್ರೆ ಅವರು ಹೇಳಿರುವ ಇದೊಂದು ತತ್ವವನ್ನು ನಾವು ಪಾಲಿಸಿದರೆ ಸಾಕು ಸಂಪೂರ್ಣ ಭೂಮಿಯಲ್ಲಿ ಶಾಂತಿ ಪ್ರೀತಿ ಶಾಶ್ವತವಾಗಿರುತ್ತದೆ. ಇಷ್ಟು ಚಿಕ್ಕ ಸಾಲಿನಲ್ಲಿ ಅಷ್ಟು ದೊಡ್ಡ ಅರ್ಥವನ್ನು ಹೇಳಿರುವ ಗಾಂಧಿ ನಮ್ಮ ಈ ಅಂತಾರಾಷ್ಟ್ರೀಯ ವಿದ್ಯಾರ್ಥಿ ಕೇಂದ್ರಕ್ಕೆ ನಿಜವಾದ ಮಾದರಿ ಪುರುಷ ಎಂದೆನಿಸಿ ಅವರ ಭಾವಚಿತ್ರವನ್ನು ಆರಿಸಿದೆವು" ಎಂದಳು. ಆಕೆಯ ಮಾತು ಕೇಳಿ ಭಾವಪೂರ್ಣ ರೋಮಾಂಚನವಾಗಿತ್ತು.

ನಡೆನುಡಿ ಜರಡಿ ಹಿಡಿದರೆ ಪರಿಪೂರ್ಣತೆ ಅನ್ನೋದು ಯಾರಲ್ಲೂ ಯಾವುದರಲ್ಲೂ ಸಿಗುವುದಿಲ್ಲ. ಗಾಂಧಿ ಸುಭಾಷ್ ಭಗತ್ ಅಂಬೇಡ್ಕರರಂತಹ ಪವಾಡಪುರುಷರಲ್ಲಾಗಲಿ, ನಮ್ಮ ನಿತ್ಯದ ಬದುಕಿನಲ್ಲಿ ನಾವು ಕಾಣುವ ಸತ್ಪುರುಷರು ಸಾಧಕರಲ್ಲಾಗಲಿ ಲೋಪಗಳ ಹುಡುಕಿ ಅವರನ್ನು ಸೈಡ್ ವಿಂಗಿಗೆ ತಳ್ಳುವುದು ಸುಲಭ. ಆದ್ರೆ ದೂರದ ಕಾಣದ ಗುಣಾತ್ಮಕ ಜೀವಗಳಲ್ಲೂ ಜೀವನದ ಅಂಶಗಳ ಹುಡುಕಿ ಆರಾಧಿಸುವ ಕಲೆ ಅದ್ಭುತವಾದ ಜೀವನಕಲೆ !

– ದಿಲೀಪ್ ಗುರುಸ್ವಾಮಿ

STATEMENT ABOUT OWNERSHIP AND OTHER PARTICULARS ABOUT BAAPU PRAPANCHA

FORM IV Rule 8

1. Place of Publication	:	Bengaluru
2. Periodicity of Publication	:	Monthly
3. Printer Name	:	**Printastic**
Nationality	:	Indian
Address	:	272, 2nd Main Road, 6th Cross, Lavakushanagar, Laggere Bangalore-58 Ph : +91 9886747417 E-mail : printastic.21@gmail.com
4. Publishers Name	:	**M C Narendra**
Nationality	:	Indian
Address	:	**Karnataka Gandhi Smaraka Nidhi** Gandhi Bhavana, Kumara Park East Bangalore - 560 001
5. Editor's Name	:	**N R Vishukumar**
Nationality	:	Indian
Address	:	**Karnataka Gandhi Smaraka Nidhi** Gandhi Bhavana, Kumara Park East Bangalore - 560 001

6. License No. - Regd. No.
KARBIL/2019/77950

I, M C Narendra - hereby declare that the particulars given above are true to the best of my knowledge and belief.

Bengaluru
15.02.2025

Sd.
Secretary
Signature of the Publisher



ಮಂಗಳೂರಿನ ಯೆನಪೋಯ ವಿಶ್ವ ವಿದ್ಯಾಲಯದಲ್ಲಿ ಎನ್ ಎಸ್ ಎಸ್ ಅಧಿಕಾರಿಗಳಿಗೆ ಐದು ದಿನಗಳ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರ್ಯದರ್ಶಿ ಡಿ ರಂದೀಪ್ ಉದ್ಘಾಟಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ವೂಡೇ ಪಿ ಕೃಷ್ಣ, ರಾಜ್ಯ ಎನ್ ಎಸ್ ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಯೇನೆಪೋಯೆ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಎಂ ವಿಜಯಕುಮಾರ್, ಗಾಂಧಿ ಭವನದ ನಿರ್ದೇಶಕ ಪ್ರೊ . ಜಿ ಬಿ ಶಿವರಾಜು ಇನ್ನಿತರ ಅಧಿಕಾರಿಗಳು ಸಮಾರಂಭದಲ್ಲಿದ್ದರು .



ಬೆಂಗಳೂರಿನ ಶಾಸ್ತ್ರೀ ಮೆಮೋರಿಯಲ್ ಇಂಗ್ಲೀಷ್ ಸ್ಕೂಲ್ ನ ಮಕ್ಕಳ ತಂಡವು ಗಾಂಧೀ ಭವನಕ್ಕೆ ಭೇಟಿ ನೀಡಿದ ಸಂದರ್ಭ ..



ಗಾಂಧಿ ಭವನಕ್ಕೆ ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಪ .ಸ ಕುಮಾರ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ ವಿ ನಾಗರಾಜಮೂರ್ತಿ, ಹಿರಿಯ ಚಿತ್ರ ಕಲಾವಿದ ರಾ .ಸೂರಿ ಭೇಟಿ ನೀಡಿದ್ದರು .




" ಸರ್ವೋದಯದೆಡೆಗೆ ನಮ್ಮ ನಡಿಗೆ " ಅಂಗವಾಗಿ ಸಾಣೇಹಳ್ಳಿ ಮಠದ ನೇತೃತ್ವದಲ್ಲಿ ನಡೆದ ಪಾದಯಾತ್ರೆ ಸಂದರ್ಭದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ವತಿಯಿಂದ ಗಾಂಧೀಜಿಯವರ ಕುರಿತಾದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಲಾಗಿತ್ತು .



ಗಾಂಧಿ ಭವನದಲ್ಲಿ ಗಣರಾಜ್ಯೋತ್ಸವ ದಿನಾಚರಣೆ



ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ(ರಿ.)ಶಿವಮೊಗ್ಗ ಮತ್ತು ರಾಷ್ಟೀಯ ಸೇವಾ ಯೋಜನೆ ಇವರ ಸಹಯೋಗದೊಂದಿಗೆ ಕುಪ್ಪಳಿಯ ಕವಿಮನೆಯಲ್ಲಿ ಜನವರಿ ತಿಂಗಳಿನಲ್ಲಿ ನಡೆದ “ ಗಾಂಧೀ: ಪ್ರೇರಕರು– ಪ್ರಭಾವಿತರು “ ಅಧ್ಯಯನ ಶಿಬಿರದ ಚಿತ್ರ



ಎಲ್ಲರ ಗಾಂಧೀಜಿ: ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ.

ಗಾಂಧೀಜಿ ಬರೆದ 124 ವೈವಿಧ್ಯಮಯ ಬರಹಗಳು ಹಾಗೂ 150 ಹೇಳಿಕೆಗಳನ್ನು ಒಳಗೊಂಡ 400 ಪುಟಗಳ ಪುಸ್ತಕ ಇದು. ಗಾಂಧೀ ಚಿಂತನೆಯ ಅಪೂರ್ವ ಮಿಂಚು, ಆಳ, ಗಾಂಭೀರ್ಯಗಳನ್ನು ಬಿಂಬಿಸುವ ಈ ಕನ್ನಡಾನುವಾದಗಳನ್ನು 'ಬಾಪೂ ಚಿಂತನೆ' ಪ್ರತಿ ತಿಂಗಳು ಪ್ರಕಟಿಸುತ್ತದೆ.

ಎರಡು ಮುಖಗಳು

ಕನ್ನಡೀಕರಣ: ಗೊರೂರು ರಾಮಸ್ವಾಮಿ ಅಯ್ಯಂಗಾರ್

– ನಟರಾಜ್ ಹುಳಿಯಾರ್

ಕುಂಭಮೇಳದಲ್ಲಿ ಕಂಡ ದೃಶ್ಯಗಳು

ಕಲ್ಕತ್ತಾದಿಂದ ಹರಿದ್ವಾರದ ಪ್ರಯಾಣ ತುಂಬ ಆಯಾಸಕರವಾಗಿತ್ತು. ಕೆಲವು ವೇಳೆ ರೈಲುಗಾಡಿಗಳಲ್ಲಿ ದೀಪಗಳೇ ಇರುತ್ತಿರಲಿಲ್ಲ. ಸಹರನ್‌ಪುರದಿಂದ ಮುಂದಕ್ಕೆ, ನಮ್ಮನ್ನೆಲ್ಲ ದನಕರುಗಳಂತೆ, ಪದಾರ್ಥಗಳಂತೆ ಗಾಡಿಗಳಿಗೆ ತುಂಬಿದರು. ಈ ಗಾಡಿಗಳಿಗೆ ಮೇಲ್ಛಾವಣಿಯಿರಲಿಲ್ಲ. ಮೇಲೆ ಉರಿಯುತ್ತಿರುವ ಸರ್ಯ, ಕೆಳಗಡೆ ಕಬ್ಬಿಣದ ನೆಲ, ಇವುಗಳ ಮಧ್ಯೆ ನಾವು ಬೆಂದು ಹೋದೆವು. ಇಂತಹ ಪ್ರಯಾಣದಿಂದ ಉಂಟಾದ ಬಾಯಾರಿಕೆಯಲ್ಲಿಯೂ ನಿಷ್ಠ ಹಿಂದೂಗಳು ಮುಸಲ್ಮಾನರು ಕೊಟ್ಟ ನೀರನ್ನು ಕುಡಿಯುವವರಾಗಿರಲಿಲ್ಲ. ಹಿಂದೂ ನೀರು ಬರುವವರೆಗೆ ಅವರು ಬಾಯಾರಿ ಕಾದಿರುತ್ತಿದ್ದರು...

ಭಾರತದಲ್ಲಿ ನಮ್ಮ ವಿಶೇಷವಾದ ಕರ್ಯ ಜಾಡಮಾಲಿಯ ಕಾರ್ಯವೇ ಎಂಬುದು ಶಾಂತಿನಿಕೇತನದ ವಾಸದಿಂದ ನಮಗೆ ಗೊತ್ತಾಗಿದ್ದಿತು. ಹರಿದ್ವಾರದಲ್ಲಿ ಸ್ವಯಂಸೇವಕರಿಗಾಗಿ ಒಂದು ಧರ್ಮಶಾಲೆಯಲ್ಲಿ ಗುಡಾರವನ್ನು ಹಾಕಿದ್ದರು. ಕಕ್ಕಸುಗಳಿಗಾಗಿ ಡಾ.ಮೆಹತಾರವರು ಕೆಲವು ಗುಂಡಿಗಳನ್ನು ತೋಡಿಸಿದ್ದರು. ಇವುಗಳನ್ನು ನೋಡಿಕೊಳ್ಳಲು ಸಂಬಳದ ಆಳುಗಳನ್ನು ಅವರು ನಿಯಮಿಸಬೇಕಾಗಿದ್ದಿತು. ಫೀನಿಕ್ಸ್ ತಂಡಕ್ಕೆ ಅದು ಕೆಲಸವಾಯಿತು. ಪಾಯಖಾನೆಯನ್ನೆಲ್ಲ ಮಣ್ಣಿನಿಂದ

ಮುಚ್ಚಿ ಅವುಗಳನ್ನು ಸಾಗಿಸಿ ಶುಚಿಯಾಗಿಡುವೆವು ಎಂದು ನಾವು ಹೇಳಿದೆವು. ಡಾ.ಮೆಹತಾ ಸಂತೋಷದಿಂದ ಒಪ್ಪಿದರು. ಈ ಜವಾಬ್ದಾರಿಯನ್ನು ಸ್ವಾಭಾವಿಕವಾಗಿ ವಹಿಸಿಕೊಂಡವನು ನಾನು. ಆದರೆ ಮಾಡುತ್ತಿದ್ದವರು ಮಗನ್‌ಲಾಲ್ ಗಾಂಧಿಯವರು. ಬಂದವರಿಗೆ ದರ್ಶನವನ್ನು ಕೊಡುತ್ತಾ, ಅಸಂಖ್ಯಾತ ಯಾತ್ರಿಕರೊಡನೆ ಧಾರ್ಮಿಕ ಚರ್ಚೆಯನ್ನು ಮಾಡುತ್ತಾ ಕುಳಿತಿರುವುದು ನನ್ನ ಕೆಲಸವಾಗಿದ್ದಿತು. ಇದರಿಂದ ನನಗೆ ಒಂದು ಗಳಿಗೆಯೂ ವಿರಾಮ ದೊರೆಯುತ್ತಿರಲಿಲ್ಲ. ಈ ದರ್ಶನಾಕಾಂಕ್ಷಿಗಳು ಸ್ನಾನಘಟ್ಟಕ್ಕೂ ನನ್ನನ್ನು ಅನುಸರಿಸುತ್ತಿದ್ದರು. ಊಟ ಮಾಡುವಾಗಲೂ ಬಿಡುತ್ತಿರಲಿಲ್ಲ. ನಾನು ದಕ್ಷಿಣ ಆಫ್ರಿಕಾದಲ್ಲಿ ಮಾಡಿದ್ದ ನಮ್ರ ಸೇವೆಯಿಂದ ಭಾರತದಲ್ಲೆಲ್ಲ ಉಂಟಾಗಿದ್ದ ಆಳವಾದ ಪರಿಣಾಮ ನನಗೆ ಗೊತ್ತಾದುದು ಹರಿದ್ವಾರದಲ್ಲಿಯೇ.

ಆದರೆ ಇದು ನನಗೆ ಸಂತೋಷದಾಯಕ ಪರಿಸ್ಥಿತಿಯಾಗಿರಲಿಲ್ಲ. ನನ್ನ ಸ್ಥಿತಿ ಇತ್ತ ಪುಲಿ ಅತ್ತ ದರಿ ಎಂಬಂತೆ ಆಗಿದ್ದಿತು. ನನ್ನನ್ನು ಯಾರೂ ಗುರುತಿಸದ ಎಡೆಯಲ್ಲಿ, ಈ ದೇಶದ ಲಕ್ಷಾವಧಿ ಜನ ಅನುಭವಿಸುವ ಕಷ್ಟ ನಿಷ್ಠುರ–ಉದಾಹರಣೆಗೆ ರೈಲ್ವೆ ಪ್ರಯಾಣ– ನನಗೂ ಉಂಟಾಗುತ್ತಿದ್ದಿತು. ನನ್ನ ವಿಷಯವನ್ನು ಕೇಳಿದ್ದವರ ಮಧ್ಯೆ ನಾನು ಇದ್ದರೆ, ಅವರ ದರ್ಶನದ ಹುಚ್ಚಿಗೆ ನಾನು ಬಲಿಯಾಗುತ್ತಿದ್ದೆನು. ಇವೆರಡರಲ್ಲಿ ಯಾವುದು ಹೆಚ್ಚು ಕರುಣಾಜನಕವೆಂಬುದನ್ನು ನಿರ್ಧರಿಸುವುದು ನನಗೆ ಎಷ್ಟೋ ಬಾರಿ ಕಷ್ಟವಾಗಿದೆ. ದರ್ಶನಾರ್ಥಿಗಳ ಈ ಕುರುಡು ಪ್ರೇಮದಿಂದ ನನಗೆ ಅನೇಕ ವೇಳೆ ಕೋಪ ಬಂದಿರುವುದಂತೂ ನನಗೆ ಗೊತ್ತು. ನನ್ನ ಮನಸ್ಸಿಗೆ ನೋವು ಸಹ ಉಂಟಾಗಿದೆ. ಆದರೆ ಪ್ರಯಾಣವೊ? ಅದು ಕಷ್ಟವಾದರೂ ಉನ್ನತಿಗೆ ಸಾಧಕವಾಗಿದೆಯೇ ಹೊರತು ಎಂದೂ ಕೋಪೋದ್ರೇಕಕ್ಕೆ ಕಾರಣವಾಗಿಲ್ಲ.

ಆ ಕಾಲದಲ್ಲಿ ನನಗೆ ಬೇಕಾದಂತೆ ತಿರುಗಾಡುವ ದೇಹಶಕ್ತಿಯಿತ್ತು. ಅದೃಷ್ಟವಶದಿಂದ ಬೀದಿಯಲ್ಲಿ ನಾನು ಹೊರಟರೆ ಜನ ಸಂಭ್ರಮಗೊಳ್ಳುವಷ್ಟು ನಾನು ಪ್ರಸಿದ್ಧನಾಗಿರಲಿಲ್ಲ. ಈ ತಿರುಗಾಟದಲ್ಲಿ ಯಾತ್ರಿಕರ ಧರ್ಮಭಾವನೆಗಿಂತ, ಅಲಕ್ಷ್ಯೆಯ, ಬೂಟಾಟಿಕೆ ಮತ್ತು ಕೊಳಕು ನನಗೆ ಹೆಚ್ಚಾಗಿ ಕಂಡಿತು. ಅಲ್ಲಿ ಬಂದು ಸೇರಿದ್ದ ಸಾಧುಗಳು ಸುಖ ಜೀವನವನ್ನು ನಡೆಸುವುದಕ್ಕಾಗಿಯೇ ಬಂದು ಸೇರಿದ್ದಂತೆ ಕಂಡರು.

ಇಲ್ಲಿ ನಾನು ಐದು ಕಾಲಿನ ಆಕಳನ್ನು ನೋಡಿದೆನು. ನನಗೆ ಆಶ್ಚರ್ಯವಾಯಿತು. ಆದರೆ ತಿಳಿವಳಿಕೆಯುಳ್ಳ ಜನ ನನ್ನ ಅಜ್ಞಾನವನ್ನು ನೀಗಿಸಿದರು. ಐದು ಕಾಲಿನ ಆ ಬಡ ಆಕಳು ಜನತೆಯ ದುರಾಸೆಗೆ ಬಲಿಯಾಗಿದ್ದಿತು. ಸಜೀವವಾಗಿದ್ದ ಕರುವಿನ ಕಾಲನ್ನು ಕತ್ತರಿಸಿ ಅದನ್ನು ಈ ಹಸುವಿನ ಭುಜಕ್ಕೆ ಅಂಟಿಸಿ ಉಂಟಾದುದೇ ಈ ಐದನೆಯ ಕಾಲು. ಈ ಇಜ್ಜೋಡಿ ಕ್ರರ್‍ಯದ ಫಲವನ್ನು ಬಡವರ ಹಣವನ್ನು ಸುಲಿಗೆ ಮಾಡಲು ಉಪಯೋಗಿಸುತ್ತಿದ್ದರು. ಇಂತಹ ಹಸುವಿನಿಂದ ಆಕರ್ಷಿತನಾಗದ ಹಿಂದೂ ಯಾರೂ ಇರಲಿಲ್ಲ. ಈ ಆಶ್ಚರ್ಯಕರ ಹಸುವಿಗಾಗಿ ಎಲ್ಲರೂ ವಿಪುಲವಾಗಿ ದಾನ ಮಾಡುತ್ತಿದ್ದರು.

ಕುಂಭಮೇಳದ ದಿನ ಬಂದಿತು... ನಾನು ಹರಿದ್ವಾರಕ್ಕೆ ಯಾತ್ರಿಕನ ಮನೋಭಾವನೆಯಿಂದ ಹೋಗಿರಲಿಲ್ಲ. ಧರ್ಮವನ್ನು ಹುಡುಕುತ್ತಾ ಯಾತ್ರಾಕ್ಷೇತ್ರಗಳಿಗೆ ಹೋಗುವುದು ನನ್ನ ಇಷ್ಟವಾಗಿರಲಿಲ್ಲ. ಆದರೆ ಅಲ್ಲಿ ಸೇರಿದ್ದರೆಂದು ಹೇಳಲಾದ ಹದಿನೇಳು ಲಕ್ಷ ಜನರು ಬರಿಯ ಬೂಟಾಟಿಕೆಯವರೂ, ನೋಟವನ್ನು ನೋಡುವವರೂ ಮಾತ್ರವೇ ಆಗಿದ್ದಿರಲಾರರು. ಅಸಂಖ್ಯಾತ ಯಾತ್ರಿಕರು ಧರ್ಮಾರ್ಜನೆಗಾಗಿಯೂ, ಅಂತಃಕರಣ ಪರಿಶುದ್ಧತೆಯನ್ನು ಸಂಪಾದಿಸಿಕೊಳ್ಳಲೂ ಅಲ್ಲಿ ಬಂದಿದ್ದರೆಂಬುದರಲ್ಲಿ ನನಗೆ ಸಂದೇಹವಿಲ್ಲ. ಇಂತಹ ನಂಬಿಕೆ ಜನರನ್ನು ಎಷ್ಟರಮಟ್ಟಿಗೆ ಉನ್ನತಿಗೇರಿಸುತ್ತದೆ ಎಂಬುದನ್ನು ಹೇಳುವುದು ಅಸಾಧ್ಯವಲ್ಲ; ಆದರೆ ಹೇಳುವುದು ಮಾತ್ರ ಬಲು ಕಷ್ಟ.

ಆದುದರಿಂದ ನಾನು ರಾತ್ರಿಯನ್ನು ಆಳವಾದ ಆಲೋಚನೆಯಲ್ಲಿ ಕಳೆದೆನು. ಸುತ್ತಲಿನ ಬೂಟಾಟಿಕೆಯ ಮಧ್ಯೆ

ಪವಿತ್ರಾತ್ಮರೂ ಇದ್ದರು. ಅವರು ದೇವರ ಎದುರಿಗೆ ಅಪರಾಧದಿಂದ ಬಿಡುಗಡೆಯಾಗುವರು. ಹರಿದ್ವಾರಕ್ಕೆ ಯಾತ್ರೆ ಹೋಗುವುದೇ ಪಾಪಕರವಾದರೆ, ನಾನು ಬಹಿರಂಗವಾಗಿ ಆ ಕರ್ಯವನ್ನು ವಿರೋಧಿಸಿ ಕುಂಭಮೇಳದ ದಿನವೇ ಹರಿದ್ವಾರವನ್ನು ಬಿಡಬೇಕು. ಹರಿದ್ವಾರಕ್ಕೂ ಕುಂಭಮೇಳಕ್ಕೂ ಹೋಗುವುದು ಪಾಪಕಾರ್ಯವಲ್ಲವಾದರೆ ಆಗ ನಾನು ಅಲ್ಲಿ ನಡೆಯುತ್ತಿರುವ ಅನ್ಯಾಯಕ್ಕೆ ಪ್ರಾಯಶ್ಚಿತ್ತವಾಗಿ ಯಾವುದಾದರೂ ತ್ಯಾಗವನ್ನು ಕೈಗೊಂಡು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು. ಇದು ನನಗೆ ಸ್ವಾಭಾವಿಕವಾಗಿತ್ತು.

* * *

ಧಾರ್ಮಿಕ ಸಂಕೇತಗಳು

ಹೃಷಿಕೇಶದಲ್ಲಿ ಅನೇಕ ಸನ್ಯಾಸಿಗಳು ಬಂದು ನನ್ನನ್ನು ನೋಡಿದರು...ನಾವು ಧರ್ಮವನ್ನು ಕುರಿತು ಚರ್ಚೆ ಮಾಡಿದೆವು. ಧಾರ್ಮಿಕ ವಿಷಯಗಳಲ್ಲಿ ನನಗೆ ಆಳವಾದ ಶ್ರದ್ಧೆ ಇರುವುದು ಅವರಿಗೆ ಗೊತ್ತಾಯಿತು. ಗಂಗಾನದಿಯಿಂದ ನಾನು ಸ್ನಾನ ಮಾಡಿ ಹಿಂದಿರುಗುತ್ತಿರುವಾಗ ಅವರು ನನ್ನನ್ನು ನೋಡಿದರು. ನಾನು ಷರಟನ್ನು ಧರಿಸಿರಲಿಲ್ಲ. ನನ್ನ ತಲೆ ಬರಿದಾಗಿದ್ದಿತು. ನನ್ನ ತಲೆಯಲ್ಲಿ ಶಿಖೆ (ಜುಟ್ಟು) ಇರಲಿಲ್ಲ. ಭುಜದಲ್ಲಿ ಜನಿವಾರ ಇರಲಿಲ್ಲ. ನೋಡಿ ಅವರಿಗೆ ದುಃಖವಾಯಿತು. ಅವರು ಹೀಗೆ ಹೇಳಿದರು: 'ಆಸ್ತಿಕ ಹಿಂದೂ ಆದ ನೀವು ಶಿಖೆ, ಯಜ್ಞೋಪವೀತಗಳಿಲ್ಲದೆ ಇರುವುದನ್ನು ನೋಡಿ ನನಗೆ ದುಃಖವಾಗುತ್ತಿದೆ. ಇವೆರಡೂ ಹಿಂದೂಧರ್ಮದ ಶಾಶ್ವತ ಚಿಹ್ನೆಗಳು. ಪ್ರತಿಯೊಬ್ಬ ಹಿಂದುವೂ ಇವನ್ನು ಧರಿಸಿರಬೇಕು.'

ಇವೆರಡನ್ನೂ ನಾನು ಬಿಟ್ಟುದಕ್ಕೆ ಒಂದು ಕತೆಯಿದೆ. ನಾನು ಹತ್ತು ವರುಷದ ಹುಡುಗನಾಗಿದ್ದಾಗ, ಬ್ರಾಹ್ಮಣ ಬಾಲಕರು ಜನಿವಾರಕ್ಕೆ ಬೀಗದ ಕೈಗೊಂಚಲುಗಳನ್ನು ಸಿಕ್ಕಿಸಿಕೊಂಡು ಆಟವಾಡುತ್ತಿದ್ದುದನ್ನು ನೋಡಿ ನಾನು ಹೊಟ್ಟೆಕಿಚ್ಚು ಪಡುತ್ತಿದ್ದೆ. ನಾನೂ ಹಾಗೆಯೇ ಮಾಡಬೇಕೆನ್ನಿಸಿತು. ಜನಿವಾರವನ್ನು ಹಾಕಿಕೊಳ್ಳುವುದು ಆಗ ಕಾಠೇವಾಡದ ಬನಿಯಾಗಳಲ್ಲಿ ಅಷ್ಟು ರೂಢಿಗೆ ಬಂದಿರಲಿಲ್ಲ. ಆದರೆ ಪ್ರಥಮ ಮೂರು ವರ್ಣದವರಿಗೂ ಅದನ್ನು ಕಡ್ಡಾಯವಾಗಿ ಮಾಡುವ ಒಂದು ಪ್ರಚಾರ (ಚಳವಳಿ) ಆಗ ತಾನೆ ಪ್ರಾರಂಭವಾಗಿದ್ದಿತು. ಪರಿಣಾಮವಾಗಿ ಗಾಂಧೀ ಕುಟುಂಬದ ಅನೇಕ ಸದಸ್ಯರು ಜನಿವಾರ ಹಾಕಿಕೊಳ್ಳುವುದನ್ನು ಮೊದಲು ಮಾಡಿದರು. ನಮಗೆ ರಾಮರಕ್ಷೆಯನ್ನು ಕಲಿಸುತ್ತಿದ್ದ ಬ್ರಾಹ್ಮಣರು ಬಂದು ನಮಗೆ (ಇಬ್ಬರು ಮೂರು ಹುಡುಗರಿಗೆ) ಯಜ್ಞೋಪವೀತ ಧಾರಣೆಯನ್ನು ಮಾಡಿಸಿದರು. ನನಗೆ ಬೀಗದ ಕೈಸರವನ್ನು ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲದಿದ್ದರೂ ನಾನು ಒಂದನ್ನು ಜನಿವಾರಕ್ಕೆ ಸಿಕ್ಕಿಸಿಕೊಂಡು ಆಡಿಸತೊಡಗಿದೆ. ಆಮೇಲೆ ಜನಿವಾರ ಕಿತ್ತು ಹೋಯಿತು. ಅದು ಇಲ್ಲವೆಂದು ನಾನು ದುಃಖಪಟ್ಟುದು ಜ್ಞಾಪಕವಿಲ್ಲ. ನಾನು ಹೊಸ ಜನಿವಾರ ಹಾಕಿಕೊಳ್ಳಲಿಲ್ಲ.

ನನಗೆ ವಯಸ್ಸಾಗುತ್ತಾ ಬಂದಂತೆ, ಭಾರತದಲ್ಲಿಯೂ ದಕ್ಷಿಣ ಆಫ್ರಿಕಾದಲ್ಲಿಯೂ ನನಗೆ ಮತ್ತೆ ಜನಿವಾರವನ್ನು ಹಾಕಿಸುವ ಕೆಲವು ಸದುದ್ದೇಶಪೂರಿತ ಪ್ರಯತ್ನಗಳು ನಡೆದವು. ಅವು ಯಾವುವೂ ಜಯಶಾಲಿಯಾಗಲಿಲ್ಲ. ಜನಿವಾರವನ್ನು ಧರಿಸಲು ಶೂದ್ರರಿಗೆ ಅಧಿಕಾರವಿಲ್ಲದ ಮೇಲೆ ಅದನ್ನು ಧರಿಸಲು ಇತರೆ ವರ್ಣಗಳವರಿಗೆ ಯಾವ ಅಧಿಕಾರವಿದೆ? ಇದು ನನಗೆ ಅನವಶ್ಯಕವಾದ ಪದ್ಧತಿಯಾಗಿ ತೋರಿದುದರಿಂದ ಅದನ್ನು ಅಂಗೀಕರಿಸಲು ನನಗೆ ಸರಿಯಾದ ಕಾರಣಗಳು ತೋರಲಿಲ್ಲ. ಜನಿವಾರದ ಮೇಲೆ ನನ್ನ ಆಕ್ಷೇಪಣೆ ಏನೂ ಇರಲಿಲ್ಲ. ಆದರೆ ಅದನ್ನು ಧರಿಸುವುದಕ್ಕೆ ನನಗೆ ಯಾವ ಕಾರಣವೂ ತೋರಲಿಲ್ಲ.


ನಾನು ವೈಷ್ಣವನಾಗಿದ್ದುದರಿಂದ, ಸಹಜವಾಗಿ ಕತ್ತಿನಲ್ಲಿ ಕಂಠಿಯನ್ನು ಧರಿಸಿದ್ದೆನು. ಶಿಖೆ ಕಡ್ಡಾಯವಾಗಿ ಇರಲೇಬೇಕೆಂಬುದು ಹಿರಿಯರ ಮತವಾಗಿದ್ದಿತು. ಆದರೆ ನಾನು ಇಂಗ್ಲೆಂಡಿಗೆ ಹೊರಟ ಸಂದರ್ಭದಲ್ಲಿ ನನ್ನ ಶಿಖೆಯನ್ನು ತೆಗೆಸಿದೆನು. ಇಲ್ಲದಿದ್ದರೆ ಬರಿ ತಲೆಯಲ್ಲಿರುವಾಗ ಅದು ನನ್ನನ್ನು ಹಾಸ್ಯಕ್ಕೆ ಈಡುಮಾಡಬಹುದು ಮತ್ತು ಆಂಗ್ಲೇಯರ ದೃಷ್ಟಿಯಲ್ಲಿ ನಾನು ಅನಾಗರಿಕನಾಗಿ ತೋರಬಹುದು ಎಂದು ಎಣಿಸಿದ್ದೆನು. ವಾಸ್ತವವಾಗಿ ಈ ಹೇಡಿತನ ನನ್ನನ್ನು ಎಲ್ಲಿಗೆ ಕರೆದೊಯ್ಯಿತೆಂದರೆ ನಿಷ್ಠೆಯಿಂದ ಶಿಖೆಯನ್ನು ಧರಿಸಿದ್ದ ನಮ್ಮಣ್ಣನ ಮಗ ಛಗನ್‌ಲಾಲ್ ಗಾಂಧಿಯೂ ಶಿಖೆಯನ್ನು ತೆಗೆಯುವಂತೆ ಮಾಡಿದೆನು. ಶಿಖೆ ಇದ್ದರೆ ಅವನು ಮಾಡುತ್ತಿದ್ದ ಸಾರ್ವಜನಿಕ ಕಾರ್ಯಕ್ಕೆ ತೊಂದರೆಯುಂಟಾಗಬಹುದೆಂದು ನಾನು ಭಾವಿಸಿದೆನು. ಅವನಿಗೆ ದುಃಖವಾದರೂ, ಅದನ್ನು ತೆಗೆದು ಹಾಕುವಂತೆ ಮಾಡಿದೆನು. ಆದುದರಿಂದ ನಾನು ವಿಷಯವನ್ನೆಲ್ಲ ಸ್ವಾಮೀಜಿಗೆ ಸ್ಪಷ್ಟಪಡಿಸಿ ಹೀಗೆ ಹೇಳಿದೆನು:

'ನಾನು ಜನಿವಾರವನ್ನು ಧರಿಸುವುದಿಲ್ಲ. ನನಗೆ ಅದರ ಅವಶ್ಯಕತೆ ತೋರುವುದಿಲ್ಲ. ಅಸಂಖ್ಯಾತ ಹಿಂದೂಗಳು ಜನಿವಾರವಿಲ್ಲದೆ ಇದ್ದಾರೆ, ಆದರೂ ಹಿಂದೂಗಳಾಗಿಯೇ ಇದ್ದಾರೆ. ಜನಿವಾರ ಆತ್ಮ ಪುನರುದ್ಧಾರದ ಒಂದು ಸಂಕೇತವಾಗಿರಬೇಕು. ಅದನ್ನು ಧರಿಸುವವನು ಹೆಚ್ಚು ಉನ್ನತವಾದ, ಹೆಚ್ಚು ಪರಿಶುದ್ಧವಾದ ಜೀವನದ ಕಡೆಗೆ ಉದ್ದೇಶಪೂರ್ವಕ ಪ್ರಯತ್ನಪಡಬೇಕು. ಹಿಂದೂಧರ್ಮದ, ಭಾರತದ, ಇಂದಿನ ಸ್ಥಿತಿಯಲ್ಲಿ ಇಂತಹ ಅರ್ಥದ ಒಂದು ಸಂಕೇತವನ್ನು ಧರಿಸುವ ಅಧಿಕಾರವನ್ನು ಹಿಂದೂಗಳು ಸಮರ್ಥನೆಗೊಳಿಸಿಕೊಳ್ಳಬಲ್ಲರೆ ಎಂಬುದು ನನಗೆ ಸಂಶಯವಾಗಿದೆ. ಹಿಂದೂಧರ್ಮ ಅಸ್ಪೃಶ್ಯತೆಯನ್ನು ತನ್ನಿಂದ ತೊಡೆದು ಹಾಕಬೇಕು, ಮೇಲು ಕೀಳು ಎಂಬ ಭೇದಭಾವಗಳನ್ನೆಲ್ಲ ತೊಲಗಿಸಬೇಕು. ತನ್ನಲ್ಲಿ ವಿಪುಲವಾಗಿ ಬೆಳೆದಿರುವ ಇತರ ಅನೇಕ ದೋಷಗಳಿಂದಲೂ, ಬೂಟಾಟಿಕೆಗಳಿಂದಲೂ ಬಿಡುಗಡೆಯಾಗಬೇಕು. ಆಗ ಮಾತ್ರ ಹಿಂದೂಗಳಿಗೆ ಜನಿವಾರವನ್ನು ಧರಿಸುವ ಹಕ್ಕು ಬರುತ್ತದೆ. ಆದ್ದರಿಂದ ಜನಿವಾರವನ್ನು ಧರಿಸಲು ನನ್ನ ಮನಸ್ಸು ನಿರಾಕರಿಸುತ್ತದೆ. ಆದರೆ ಶಿಖೆಯ ವಿಷಯದಲ್ಲಿ ನಿಮ್ಮ ಸೂಚನೆ ಪರಿಗಣಿಸಲು ಅರ್ಹವಾಗಿದೆ. ನಾನು ಹಿಂದೆ ಶಿಖೆಯನ್ನು ಇಟ್ಟುಕೊಂಡಿದ್ದೆನು. ಆದರೆ ಸುಳ್ಳು ನಾಚಿಕೆಯಿಂದ ಅದನ್ನು ತೆಗೆದುಬಿಟ್ಟೆನು. ಮತ್ತೆ ಶಿಖೆಯನ್ನು ಬೆಳೆಸುವುದು ಸರಿ ಎಂದು ನಾನು ಭಾವಿಸುತ್ತೇನೆ. ನನ್ನ ಸಂಗಡಿಗರೊಡನೆ ಈ ವಿಷಯವನ್ನು ಚರ್ಚಿಸುವೆನು.'

ಯಜ್ಞೋಪವೀತದ ವಿಷಯದಲ್ಲಿ ನಾನು ಹೇಳಿದುದನ್ನು ಸ್ವಾಮಿಗಳು ಒಪ್ಪಲಿಲ್ಲ. ಜನಿವಾರವನ್ನು ಹಾಕಿಕೊಳ್ಳಬಾರದೆಂಬುದಕ್ಕೆ ನನಗೆ ಯಾವ ಕಾರಣಗಳಿದ್ದವೋ, ಅವೇ ಕಾರಣಗಳೇ ಜನಿವಾರವನ್ನು ಧರಿಸಬೇಕೆಂಬುದಕ್ಕೆ ಕಾರಣಗಳಾಗಿ ಸ್ವಾಮಿಗಳಿಗೆ ತೋರಿದವು. ಇಂದಿಗೂ ಸಹ ಆ ವಿಷಯದಲ್ಲಿ ನನ್ನ ಅಭಿಪ್ರಾಯಗಳು ಸ್ವಲ್ಪ ಹೆಚ್ಚು ಕಡಿಮೆ ಹೃಷಿಕೇಶದಲ್ಲಿ ಇದ್ದಂತೆಯೇ ಇವೆ. ಎಲ್ಲಿಯವರೆಗೆ ಬೇರೆ ಬೇರೆ ಧರ್ಮಗಳಿರುತ್ತವೆಯೋ ಅಲ್ಲಿಯವರೆಗೆ ಅವುಗಳಿಗೆಲ್ಲ ಪ್ರತ್ಯೇಕವಾದ ಬಾಹ್ಯ ಸಂಕೇತ ಬೇಕಾಗಬಹುದು. ಆದರೆ ಈ ಸಂಕೇತವೇ ದೇವರೆಂದು ಭಾವಿಸಿ, ಒಂದು ಧರ್ಮಕ್ಕಿಂತ ಇನ್ನೊಂದು ಧರ್ಮ ಉತ್ತಮ ಎಂಬುದನ್ನು ಸಾಧಿಸುವ ಉಪಕರಣವಾದರೆ, ಆ ಸಂಕೇತ ತ್ಯಾಜ್ಯ.

('ಆ್ಯನ್ ಆಟೋಬಯಾಗ್ರಫಿ ಆಫ್ ದ ಸ್ಟೋರಿ ಆಫ್ ಮೈ ಎಕ್ಸಪರಿಮೆಂಟ್ಸ್ ವಿತ್ ಟ್ರೂತ್' ಕೃತಿಯ ಆಯ್ದ ಭಾಗಗಳು.)

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ
RNI No. KARBIL/2019/77950 Regd No.KA/BGGPO/2589/2023-25
Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58